॥ ಶ್ರೀಃ ॥

ಪಂಚರಾತ್ರಾಗಮೋಕ್ತ

ಧನುರ್ಮಾಸ ಮಹಾತ್ಮ್ಯೆ

(ಮೂಲ ಹಾಗೂ ಕನ್ನಡಾನುವಾದ)

ಅನುವಾದಕರು:

ಆ. ರಾ. ಪಂಚಮುಖಿ

ಗುರುಸಾರ್ವಭೌಮ

ಶ್ರೀ ರಾಘವೇಂದ್ರತೀರ್ಥ ಪ್ರತಿಷ್ಠಾನಂ

ಧಾರವಾಡ.

“ ಧನುರ್ಮಾಸ ಮಹಾತ್ಮ್ಯ ”

ಪ್ರಕಾಶಕ : ಕಾರ್ಯದರ್ಶಿ
ಗುರುಸಾರ್ವಭೌಮ ಶ್ರೀರಾಘವೇಂದ್ರತೀರ್ಥ ಪ್ರತಿಷ್ಠಾನಂ
ಪವಮಾನ ಸದನ, ಧಾರವಾಡ–೫೮೦ ೦೦೭

ಪ್ರಥಮ ಮುದ್ರಣ ೧೯೯೬

ಬೆಲೆ : ರೂ. ೫–೦೦ ಮಾತ್ರ

ಪ್ರತಿಗಳು : ೧೦೦೦ ಪ್ರತಿಗಳು

ಮುದ್ರಕರು : ಶಿವಶಂಕರ ಪ್ರಿಂಟಿಂಗ್ ಪ್ರೆಸ್,
ಹೆಬ್ಬಳ್ಳಿ ಅಗಸಿ, ಧಾರವಾಡ–೧

|| ಶ್ರೀ ||

ಮೊದಲ್ನುಡಿ

ಸೂರ್ಯನು ಮೇಷಾದಿ ರಾಶಿಗಳಲ್ಲಿ ಸಂಚರಿಸುವನು. ಒಂದು ರಾಶಿಯಲ್ಲಿ ಒಂದು ತಿಂಗಳಿನಂತೆ ಹನ್ನೆರಡು ರಾಶಿಗಳಲ್ಲಿ ಸಂಚರಿಸಿದಾಗ ಒಂದು ವರ್ಷ ಪೂರ್ತಿಯಾಗುವದು. ಸೂರ್ಯನು ವೃಶ್ಚಿಕ ರಾಶಿಯನ್ನು ಬಿಟ್ಟು ಧನು ರಾಶಿಯಲ್ಲಿ ಪ್ರವೇಶಿಸಿದ ದಿನಕ್ಕೆ ಧನುಸಂಕ್ರಾಂತಿ ಎಂದು ಹೆಸರು. ಧನು ರಾಶಿಯಲ್ಲಿ ಸೂರ್ಯನು ೧ ತಿಂಗಳು ಇರುವ ಅವಧಿಯು ಅಂದರೆ ಧನುಸಂಕ್ರಾಂತಿಯಿಂದ ಮಕರ ಸಂಕ್ರಾಂತಿಯ ವರೆಗಿನ ಅವಧಿಯು ಧನುರ್ಮಾಸವೆಂದು ಕರೆಯಲ್ಪಡುತ್ತದೆ. ಅತ್ಯಂತ ಪವಿತ್ರವಾದ ಈ ಧನುರ್ಮಾಸದಲ್ಲಿ ನಿತ್ಯ ಉಷಃಕಾಲದಲ್ಲೆದ್ದು ಸ್ನಾನಾದಿಗಳನ್ನು ಮಾಡಿ ಪರಮಾತ್ಮನನ್ನು ಪೂಜಿಸಿ ಹೆಸರು ಬೇಳೆಯ ಹುಗ್ಗಿಯನ್ನು ಶ್ರೀಹರಿಗೆ ನಿವೇದಿಸಬೇಕು. ಬ್ರಾಹ್ಮಣರಿಗೆ ಭೋಜನ ಮಾಡಿಸಿ ನಂತರ ತಾನು ಸ್ವೀಕರಿಸಬೇಕು. ಹೀಗೆ ಮಾಡುವುದರಿಂದ ದೀರ್ಘಾಯುಷ್ಯ, ಉತ್ತಮ ಆರೋಗ್ಯಗಳು ಲಭಿಸುತ್ತವೆ. ಇಹಲೋಕದಲ್ಲಿಯ ಸಕಲ ಐಶ್ವರ್ಯಗಳೂ ಪ್ರಾಪ್ತವಾಗುತ್ತವೆ- ಧನುರ್ಮಾಸದಲ್ಲಿ ಶ್ರೀಹರಿಯ ಒಂದು ದಿನದ ಪೂಜೆಯಿಂದ ಸಾವಿರ ವರ್ಷಗಳ ಪೂಜೆಯು ಸಿದ್ಧಿಸುತ್ತದೆ. ಜನ್ಮ ಜನ್ಮಾಂತರಗಳಲ್ಲಿ ವೈಷ್ಣವ ಜನ್ಮವು ಪ್ರಾಪ್ತವಾಗುತ್ತದೆ. ಇವೇ ಮೊದಲಾದ ಧನುರ್ಮಾಸದ ಮಹಿಮೆಗಳು ಆಗ್ನೇಯ ಪುರಾಣದ ೫೨ ನೆಯ ಅಧ್ಯಾಯದಲ್ಲಿ ಹಾಗೂ ಶ್ರೀ ಕೃಷ್ಣಾಚಾರ್ಯರ ಸ್ಮೃತಿ ಮುಕ್ತಾವಳಿ (ಕಾಲನಿರ್ಣಯ ಪ್ರಕರಣ) ಯಲ್ಲಿ ವರ್ಣಿತವಾಗಿವೆ.

ಧನುರ್ಮಾಸದಲ್ಲಿ ಛಳಿ ಹೆಚ್ಚಾಗಿರುವುದರಿಂದ ದೇಹಕ್ಕೆ ಉಷ್ಣತೆಯ ಅವಶ್ಯಕತೆ ಹೆಚ್ಚಾಗಿರುತ್ತದೆ. ಜಾಠರಾಗ್ನಿಯು ತೀವ್ರವಾಗಿರುತ್ತದೆ.

ಅಂತೆಯೇ ಉಷ್ಣತೆಯನ್ನು ಕೊಡುವ ಮುದ್ಗಾನ್ನ, ಶುಂಠಿ, ಬೆಣ್ಣೆ, ತುಪ್ಪ, ನೆಲ್ಲೀಕಾಯಿ ರಸ ಮುಂತಾದವುಗಳನ್ನು ಶ್ರೀಹರಿಗೆ ನಿವೇದಿಸಿ ಸ್ವೀಕರಿಸ ಬೇಕೆಂದು ವಿಧಿಸಿದ್ದು ಸೂಕ್ತವಾಗಿ ತೋರುತ್ತದೆ.

ಪಂಚರಾತ್ರಾಗಮದಲ್ಲಿ ಹಂಸನಾಮಕ ಪರಮಾತ್ಮನು ಚತುರ್ಮುಖ ಬ್ರಹ್ಮನಿಗೆ ನಿರೂಪಿಸಿದ "ಧನುರ್ಮಾಸ ಮಹಾತ್ಮೆಯನ್ನು ಈ ಚಿಕ್ಕ ಗ್ರಂಥದ ಮೂಲಕ ಪ್ರಕಾಶಪಡಿಸಲು ಸಂತೋಷವಾಗುತ್ತಿದೆ.

ಈ ಅನುವಾದ ಗ್ರಂಥವು ಅಸ್ಮದ್ಗುರ್ವಂತರ್ಗತ ಶ್ರೀಮತ್ಸುಶಮೀಂದ್ರ ತೀರ್ಥಗುರ್ವಂತರ್ಗತ ಶ್ರೀಮದ್ರಾಘವೇಂದ್ರತೀರ್ಥಗುರ್ವಂತರ್ಗತ ಶ್ರೀಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಲಕ್ಷ್ಮೀವೆಂಕಟೇಶಾಭಿನ್ನ ಮಾಸನಿಯಾಮಕ ಶ್ರೀ ಧನುರ್ನಾರಾಯಣನ ಪಾದಕಮಲಗಳಲ್ಲಿ ಸಮರ್ಪಿತ.

ಗುರುವಾರ
೨೨-೨-೧೯೭೬

ಆ. ರಾ. ಪಂಚಮುಖಿ
ಅನುವಾದಕ

ಪರಿವಿಡಿ

|| ಶ್ರೀ ||

ಪಂಚರಾತ್ರಾಗಮೋಕ್ತ

|| ಧನುರ್ಮಾಸ ಮಾಹಾತ್ಮ್ಯ ||

|| ಶ್ರೀ ಲಕ್ಷ್ಮೀ ನೃಸಿಂಹ ಪ್ರಸೀದ || ಶ್ರೀ ಗುರುಭ್ಯೋ ನಮಃ ||

ಅಧ್ಯಾಯ ೧

"ನಿತ್ಯವಿಧಿಗಳು"

ಶೌನಕ ಉವಾಚ

ಸೂತ ಸೂತ ಮಹಾಭಾಗ ಸರ್ವಶಾಸ್ತ್ರವಿಶಾರದ ।
ಪುರಾಣಮಖಿಲಂ ವೇತ್ಸಿ ಪಾರಾಶರ್ಯಪ್ರಸಾದತಃ ||೧||

ಸರ್ವೇಷಾಮಪಿ ಮಾಸಾನಾಂ ಮಾಹಾತ್ಮ್ಯಂ ತ್ವನ್ಮುಖಾತ್ ಶ್ರುತಂ ।
ಅಧುನೇಹ ಮಹಾಭಾಗ ಧನುರ್ಮಾಹಾತ್ಮ್ಯಮುತ್ತಮಂ ||೨||

ಶೌನಕರು ಸೂತರನ್ನು ಕುರಿತು- "ಭೋ ಮಹಾಭಾಗ ಸೂತರೇ, ಸರ್ವಶಾಸ್ತ್ರಪ್ರವೀಣರಾದ ಸೂತರೇ, ಶ್ರೀ ವೇದವ್ಯಾಸರ ಅನುಗ್ರಹದಿಂದ ನೀವು ಸಕಲ ಪುರಾಣಗಳನ್ನು ಬಲ್ಲವರಾಗಿದ್ದೀರಿ. ||೧|| ಇಂದಿನ ವರೆಗೆ ನಿಮ್ಮ ಮುಖಕಮಲದಿಂದ ಎಲ್ಲ ಮಾಸಗಳ ಮಹಾತ್ಮೆಗಳನ್ನು ಕೇಳಿದೆವು. ಭೋ ಮಹಾಭಾಗರೇ, ಈಗ ನಾವು ಧನುರ್ಮಾಸದ ಶ್ರೇಷ್ಠವಾದ ಮಹಾತ್ಮೆ

ಮಾಸಾನಾಮುತ್ತಮಂ ಪ್ರೋಕ್ತಂ ಮಾಸೇ ಮಾರ್ಗಶಿರಾಭಿಧೇ |
ತಸ್ಮಿನ್ ಮಾಸೇ ಕಥಂ ಕಾರ್ಯಾ ಹರೇಃ ಪೂಜಾ ಮಹಾಮತೇ ||೩||

ಕೈಃ ಕೈಃ ದ್ರವ್ಯೈಃ ಪೂಜನೀಯೋ ಮಾಧವೋ ಧನುರಾಗಮೇ |
ಏತದ್ ವೇದಿತುಮಿಚ್ಛಾಮೋ ವಕ್ತುಮರ್ಹಸ್ಯಶೇಷತಃ ||೪||

ಸೂತ ಉವಾಚ—
ಅಹೋ ಧನ್ಯ ಅಹೋ ಧನ್ಯಃ ಜಾತೋ ಅದ್ಯ ತ್ವಯಾಽಧುನಾ |
ಯತೋ ಅದ್ಯ ಹರೇರ್ಧರ್ಮಾನ್ ಶ್ರೋತುಂ ಪೃಷ್ಟೋ ತ್ವಯಾಽ
ಧುನಾ ||೫||

ಹರೇರುಚ್ಚಾರಣೇನೈವ ಸರ್ವಪಾಪಕ್ಷಯೋ ಭವೇತ್ |
ಕಿಮು ತದ್ಧರ್ಮಶ್ರವಣೇ ನಶ್ಯೇತ್ ಪಾಪೋ ನ ಸಂಶಯಃ ||೬||

ಯನ್ನು ಕೇಳಬಯಸಿದ್ದೇವೆ. ||೨|| ಮಾರ್ಗಶೀರ್ಷ ಮಾಸದಲ್ಲಿ ಬರುವ ಈ ಧನುರ್ಮಾಸದ ಮಹಾತ್ಮ್ಯೆಯು ಅತಿ ಶ್ರೇಷ್ಠವಾಗಿದೆಯೆಂದು ಕೇಳಿದ್ದೇವೆ. ಭೋ ಮಹಾಮತೆ, ಆ ಧನುರ್ಮಾಸದಲ್ಲಿ ಶ್ರೀಹರಿಯ ಪೂಜೆಯನ್ನು ಯಾವ ಕ್ರಮದಿಂದ ಮಾಡಬೇಕು?||೩|| ಧನುರ್ಮಾಸವು ಬಂದಾಗ ಶ್ರೀಹರಿ ಮಾಧವನನ್ನು ಯಾವ ಯಾವ ಪೂಜಾ ದ್ರವ್ಯಗಳಿಂದ ಪೂಜಿಸಬೇಕು ? ಇದೆಲ್ಲವನ್ನು ನಿಮ್ಮಿಂದ ತಿಳಿಯಲು ಉತ್ಸುಕರಾಗಿದ್ದೇವೆ. ಆದ್ದರಿಂದ ಎಲ್ಲವನ್ನು ತಿಳಿಸುವಂಥವರಾಗಿರಿ" ಎಂದು ವಿಜ್ಞಾಪಿಸಲು ||೪|| ಸೂತರು ಉತ್ತರಿಸಲು ಉಪಕ್ರಮಿಸುತ್ತಾರೆ "ಭೋ ಶೌನಕಮುನಿಗಳೇ, ಇಂದು ನೀವು ಶ್ರೀಹರಿಯ ಪೂಜಾವಿಷಯಕ ಧರ್ಮಗಳನ್ನು ನನ್ನಿಂದ ಕೇಳಿ ತಿಳಿಯಲು ಬಯಸಿದ್ದರಿಂದ ಅಹೋ ನಾನು ಧನ್ಯನಾದೆನು. ನಾನು ನಿಜ ವಾಗಿಯೂ ಧನ್ಯನಾದೆನು. ಅಹೋ ಶೌನಕಮುನಿಗಳೇ ನಿಮ್ಮಿಂದಾಗಿ ನನ್ನ ಜನ್ಮವು ಇಂದು ಸಾರ್ಥಕಗೊಳಿಸಲ್ಪಟ್ಟಿತು. ||೫|| 'ಹರಿ' ಎಂಬೆರಡು ಅಕ್ಷರಗಳ ಉಚ್ಚಾರಣೆ ಮಾತ್ರದಿಂದ ಸರ್ವಪಾಪಗಳ ನಾಶವಾಗುವದು. ಹೀಗಿರುವಾಗ ಶ್ರೀಹರಿಯ ಪೂಜಾದಿ ಧರ್ಮಗಳನ್ನು ಆಚರಿಸುವುದರಿಂದ ಪಾಪಗಳು ನಾಶವಾಗದಿರುವವೇ ? ನಿಶ್ಚಯವಾಗಿ ನಾಶವಾಗುವವು.

ತಸ್ಮಾತ್ಸದಾ ನೃಭಿಃ ಕಾರ್ಯಾ ತತ್ಸೇವಾ ಪುರುಷೈಃ ಸದಾ ।
ಚಾಪಸ್ಥೇ ಚ ಯದಾ ಭಾನೌ ಸ್ನಾತುಂ ಗಚ್ಛೇತ್ಸರಂ ನರಃ ||೭||
ಪದೇ ಪದೇಽಶ್ವಮೇಧಂ ಚ ಪ್ರಾಪ್ನೋತ್ಯೇವ ನ ಸಂಶಯಃ ।
ಮಾರ್ಗಶೀರ್ಷಾಭಿಧೇ ಮಾಸೇ ಚಾಪಸ್ಥೇ ಚ ದಿವಾಕರೇ ||೮||
ಭಾಗೀರಥ್ಯಾವಗಾಹಂ ಚ ಸ್ಮೃತಿಮಾತ್ರೇಣ ಲಭ್ಯತೇ ।
ಬ್ರಾಹ್ಮೇ ಮುಹೂರ್ತೇ ಚೋತ್ಥಾಯ ಸ್ಮರೇತ್ ದೇವಕಿನಂದನಂ||೯||
ಕೃತ್ವಾ ಬಹಿಸ್ಥಲೇ ದೂರೇ ಮಲಮೂತ್ರಂ ವಿಸರ್ಜಯೇತ್ ।
ಮೃತ್ತಿಕಾಂ ಚೈವ ಮಾದಾಯ ಕೃತ್ವಾ ಶೌಚಂ ಯಥಾವಿಧಿ ||೧೦||
ದಂತಧಾವನಪೂರ್ವಾಣಿ ಕೃತ್ವಾ ಕಾರ್ಯಮ (ಕಾರ್ಯಾಣ್ಯ)
ತಂದ್ರಿತಃ ।
ಬಹಿರ್ಜಲೇ ತದಾ ಸ್ನಾತ್ವಾ ನಿತ್ಯಕರ್ಮ ಸಮಾಚರೇತ್ ||೧೧||

ಇವರಲ್ಲಿ ಸಂದೇಹವಿಲ್ಲ. ||೬|| ಆದ್ದರಿಂದ ಮಾನವರೆಲ್ಲರೂ ಸದಾಕಾಲ ಶ್ರೀಹರಿಯ ಸೇವಾರೂಪವಾಗಿ ಎಲ್ಲ ಕಾರ್ಯಗಳನ್ನು ಮಾಡಬೇಕು. ಸೂರ್ಯನು ಧನುರಾಶಿಯಲ್ಲಿರುವಾಗ ಅಂದರೆ ಧನುರ್ಮಾಸದಲ್ಲಿ ಪ್ರಾತಃಕಾಲ ಬಹಿರ್ಜಲಾಶಯದಲ್ಲಿ ಸ್ನಾನ ಮಾಡಲು ಹೋಗುವ ಮನುಷ್ಯನು ||೭|| ತಾನಿಡುವ ಒಂದೊಂದು ಹೆಜ್ಜೆಗೂ ಅಶ್ವಮೇಧಯಾಗದ ಫಲವನ್ನು ಪಡೆಯು ವನು. ಮಾರ್ಗಶೀರ್ಷಮಾಸದಲ್ಲಿ ಸೂರ್ಯನು ಧನುರಾಶಿಯಲ್ಲಿರುವ ಅವಧಿ ಯಲ್ಲಿ ||೮|| ಪ್ರಾತಃಕಾಲ ಭಾಗೀರಥೀ ನದಿಯಲ್ಲಿ ಸ್ನಾನಮಾಡುವೆನು' ಎಂದು ಸಂಕಲ್ಪಿಸುವ ಮಾತ್ರದಿಂದಲೇ ಭಾಗೀರಥೀ ಸ್ನಾನದ ಫಲವು ಲಭಿಸು ವದು. ಆಗ ಪ್ರತಿದಿನ ಬ್ರಾಹ್ಮೀಮುಹೂರ್ತದಲ್ಲೆದ್ದು ದೇವಕೀಸುತ ಶ್ರೀಕೃಷ್ಣನನ್ನು ಧ್ಯಾನಿಸಬೇಕು. ||೯|| ಅನಂತರ ಗ್ರಾಮದಿಂದ ದೂರವಿರುವ ಸ್ಥಳದಲ್ಲಿ ಮಲಮೂತ್ರಗಳನ್ನು ವಿಸರ್ಜಿಸಿ ವಿಧಿಪೂರ್ವಕ ಮೃತ್ತಿಕಾಶೌಚವನ್ನು ಮಾಡಿಕೊಳ್ಳಬೇಕು ||೧೦|| ಅನಂತರ ದಂತಧಾವನ ಪೂರ್ವಕವಾದ ಕಾರ್ಯ ಗಳನ್ನು ಆಲಸ್ಯವಿಲ್ಲದೇ ಮುಗಿಸಿ ಬಹಿರ್ಜಲದಲ್ಲಿ ಸ್ನಾನವನ್ನು ಮಾಡಿ ನಿತ್ಯದ

ದೇವಪೂಜಾ ತಥಾ ಕಾರ್ಯಾ ಗಂಧಪುಷ್ಪೈಸ್ತಥೈವ ಚ ।
ನೈವೇದ್ಯಂ ಚ ಪ್ರದಾತವ್ಯಂ ಮುದ್ಗಮಿಶ್ರಿತಮೋದನಮ್ ||೧೨||

ನವನೀತಂ ಚಾರ್ಪಯಿತ್ವಾ ಮಾಷಾವಿಷ್ಟೇನ ವಾಚಕ ।
ಸೂರಣಂ ಪೇಷಯಿತ್ವಾಥ ಸರ್ವೋಪಸ್ಕರಸಂಯುತಮ್ ||೧೩||

ನವಶಾಕಾಂಸ್ತಥಾ ಭಕ್ಷಾನ್ ಲೇಹ್ಯಪೇಯಾಂಸ್ತಥೈವ ಚ ।
ದಧಿಖಂಡಂ ಪ್ರದಾತವ್ಯಂ ಫಲಾನಿ ವಿವಿಧಾನಿ ಚ ||೧೪||

ತಾಂಬೂಲಂ ದಕ್ಷಿಣಾಂ ಚೈವ ಆರ್ತಿಂ ಕೃತ್ವಾ ಮನೋರಮಾಮ್ ।
ಪೂಜಾಂ ಚ ಷೋಡಶಾಚಾರಾನ್ ಭಕ್ತ್ಯಾ ಚೈವ ಪ್ರಕಲ್ಪ-
-ಯೇತ್ ||೧೫||

ರವೇರುದಯವೇಲಾಯಾಂ ಹರೇಃ ಪೂಜಾಂ ಸಮಾಪಯೇತ್ ।
ಬ್ರಾಹ್ಮಣಾನಾಂ ತತೋ ಪೂಜಾಂ ಯಥಾಶಕ್ತ್ಯಾ ಪ್ರಕಲ್ಪ-
-ಯೇತ್ ||೧೬||

ಆಹ್ನಿಕ ಕರ್ಮಗಳನ್ನು ಮಾಡಿಕೊಳ್ಳಬೇಕು ||೧೧|| ನಂತರ ಪ್ರತಿದಿನವೂ ಗಂಧಪುಷ್ಪಗಳಿಂದ ದೇವಪೂಜೆಯನ್ನು ಭಕ್ತಿಯಿಂದ ಮಾಡಿ ವಿಶೇಷವಾಗಿ ಹೆಸರುಬೇಳೆಯಿಂದ ಮಿಶ್ರಿತವಾದ ಬೇಯಿಸಿದ ಅನ್ನವನ್ನು ಅಂದರೆ ಹುಗ್ಗಿಯನ್ನು (ಮುದ್ಗಾನ್ನ) ಶ್ರೀಹರಿಗೆ ನಿವೇದಿಸಬೇಕು. ||೧೨|| ಇದಲ್ಲದೇ ಬೆಣ್ಣೆ, ಸರ್ವ ಉಪಸ್ಕಾರಗಳಿಂದ ಕೂಡಿದ ಉದ್ದಿನಹಿಟ್ಟು, ||೧೩|| ಹೊಸ ಹೊಸ ಕಾಯಿಪಲ್ಲೆಗಳು, ವಿವಿಧ ಭಕ್ಷಗಳು, ರಸಗಳು (ಲೇಹ್ಯ), ಪಾನೀಯಗಳು (ಪೇಯ), ಗಟ್ಟಿಯಾದ ಮೊಸರು, ವಿವಿಧ ಫಲಗಳು ||೧೪|| ತಾಂಬೂಲ, ದಕ್ಷಿಣಾ ಮುಂತಾದವುಗಳನ್ನು ಪರಮಪುರುಷನಿಗೆ ಸಮರ್ಪಿಸಿ ನಂತರ ಮನೋಹರವಾದ ಮಹಾಮಂಗಳಾರತಿಯನ್ನು ಮಾಡಬೇಕು. ಈ ರೀತಿ ಪ್ರತಿದಿನ ಷೋಡಶೋಪಚಾರಗಳಿಂದ ಶ್ರೀಹರಿಯ ಪೂಜೆಯನ್ನು ಮಾಡಿ ||೧೫|| ಸೂರ್ಯೋದಯಕ್ಕೆ ಸರಿಯಾಗಿ ದೇವಪೂಜೆಯನ್ನು ಮುಗಿಸಬೇಕು. ದೇವಪೂಜಾನಂತರದಲ್ಲಿ ಬ್ರಾಹ್ಮಣರ ಪೂಜೆಯನ್ನು

ಬ್ರಾಹ್ಮಣೈಸ್ಸಹ ಭೋಕ್ತವ್ಯಂ ತದನ್ನಂ ಯನ್ನಿವೇದಿತಮ್ ।
ದ್ವಿಜಾತಿರಿಕ್ತಂ ಯೋ ಭುಂಕ್ತೇ ತದನ್ನಂ ವಿಷ್ಠಯಾ ಸಮಮ್ ||೧||

ಜ್ಞಾನಭಕ್ತಿಯುತೋ ವಿಪ್ರಃ ಸರ್ವಾನ್ ಪಾಪಾನ್ ಕ್ಷಿಣೋತಿ ಹಿ ।
ತಸ್ಮಾದ್ದದ್ಯಾದ್ದ್ವಿಜೇಂದ್ರಾಯ ತತ್ತ್ವನಿಷ್ಠಾಯ ಸತ್ತಮ ||೧೮||

ಅನ್ನದೇ ಸರ್ವತೀರ್ಥಾನಿ ಅನ್ನದೇ ಸರ್ವದೇವತಾಃ ।
ದಾತವ್ಯಂ ಚೈವ ಚಿತ್ರಾನ್ನಂ ವೈಷ್ಣವಾಯ ದ್ವಿಜಾತಯೇ ||೧೯||

ಭಕ್ಷಭೋಜ್ಯಯುತಂ ಚೈವ ಸಘೃತಂ ನವನೀತಕಮ್ ।
ಬ್ರಾಹ್ಮಣಾನ್ ಭೋಜಯಿತ್ವಾಥ ಸ್ವಯಂ ಭುಕ್ತ್ವಾ ತತಃ ಪರಮ್ ||೨೦||

ಶಕ್ತ್ಯನುಸಾರವಾಗಿ ಮಾಡಿ ||೧೬|| ನಂತರ ಆಮಂತ್ರಿತ ಬ್ರಾಹ್ಮಣರು ಹಾಗೂ ಅತಿಥಿಗಳೊಂದಿಗೆ ಶ್ರೀಹರಿಗೆ ನಿವೇದಿತವಾದ ಪದಾರ್ಥಗಳನ್ನು ಭೋಜನ ಮಾಡಬೇಕು. ಬ್ರಾಹ್ಮಣರಿಲ್ಲದೇ ಭೋಜನವನ್ನು ಯಾವನು ಮಾಡುವನೋ ಅವನು ಉಣ್ಣುವ ಅನ್ನವು ಮಲಕ್ಕೆ ಸಮಾನವಾಗಿರುವದು. ||೧೭|| ಜ್ಞಾನ ಭಕ್ತಿಯುತನಾದ ಬ್ರಾಹ್ಮಣನು ಪರರ ಸರ್ವಪಾಪಗಳನ್ನು ಕಳೆಯುಲು ಸಮರ್ಥನಾಗಿರುವನು. ಆದ್ದರಿಂದಲೇ ಹೇ ಶೌನಕಮುನಿಗಳೇ ಸ್ವತಂತ್ರ ತತ್ತ್ವನಾದ ಶ್ರೀಹರಿಯಲ್ಲಿ ಸದಾ ಆಸಕ್ತನಾಗಿರುವ ಸತ್ಪಾತ್ರನಾದ ಶ್ರೇಷ್ಠ ಬ್ರಾಹ್ಮಣನಿಗೆ ದಾನ ಭೋಜನಾದಿಗಳನ್ನು ಮಾಡಿಸಬೇಕು ||೧೮|| ಅನ್ನದಾನ ಮಾಡುವವನಲ್ಲಿ ಸಕಲ ತೀರ್ಥಗಳು ಸನ್ನಿಹಿತವಾಗಿರುವವು, ಅವನಲ್ಲಿ ಸರ್ವ ದೇವತೆಗಳ ಸನ್ನಿಧಾನವಿರುವದು ವಿಷ್ಣುಭಕ್ತನಾದ ಬ್ರಾಹ್ಮಣನಿಗೆ ಧನುರ್ಮಾಸದಲ್ಲಿ ಚಿತ್ರಾನ್ನವನ್ನೂ ದಾನವಾಗಿ ಕೊಡಬೇಕು. ||೧೯|| ಸಘೃತ ಭಕ್ಷ್ಯ ಭೋಜ್ಯಗಳನ್ನು, ಬೆಣ್ಣೆ ಹುಗ್ಗಿಗಳನ್ನುಬಡಿಸಿ ಬ್ರಾಹ್ಮಣರ ಭೋಜನ ಮಾಡಿಸಿ ನಂತರ ಯಜಮಾನನು ಸ್ವಯಂ ತನ್ನ ಕುಟುಂಬದ ಜನರೊಂದಿಗೆ ಭೋಜನ ಮಾಡಬೇಕು. ||೨೦||

ತಾಂಬೂಲಂ ದಕ್ಷಿಣಾಂ ದತ್ವಾ ಆಶೀರ್ವಾದಾಂಸ್ತಥೈವ ಚ ।
ಏವಂ ಯಃ ಕುರುತೇ ಭಕ್ತ್ಯಾ ಸರ್ವಪಾಪೈಃ ಪ್ರಮುಚ್ಯತೇ ॥೨೦॥

ಇತಿಹಾಸಂ ಪುರಾ ಪ್ರೋಕ್ತಂ ಬ್ರಹ್ಮಣೇ ನಾಭಿಜನ್ಮನೇ ।
ಹಂಸರೂಪೀ ಹರಿಃ ಪ್ರಾಹ ಧನುರ್ಮಾಹಾತ್ಮ್ಯಮುತ್ತಮಮ್ ।
ಯ ಏತತ್ ಶ್ರುಣುಯಾದ್ವಿದ್ವಾನ್ ಸರ್ವಪಾಪೈಃ
ಪ್ರಮುಚ್ಯತೇ ॥೨೨॥

"ಇತಿ ಪಂಚರಾತ್ರಾಗಮೇ ಧನುರ್ಮಾಸಮಾಹಾತ್ಮ್ಯೇ ಬ್ರಹ್ಮಹಂಸ ಸವಾದೇ ಪ್ರಥಮೋಽಧ್ಯಾಯಃ ॥

ಭೋಜನಾನಂತರ ಬ್ರಾಹ್ಮಣರಿಗೆ ತಾಂಬೂಲ ದಕ್ಷಿಣೆಗಳನ್ನು ಕೊಟ್ಟು ಅವರಿಂದ ಆಶೀರ್ವಾದಗಳನ್ನು ಪಡೆಯಬೇಕು. ಈ ರೀತಿ ಪ್ರತಿದಿನ ಭಕ್ತಿಯಿಂದ ಆಚರಿಸುವವನು ಸರ್ವಪಾಪಗಳಿಂದ ಮುಕ್ತನಾಗುವನು. ॥೨೧॥ ಹಿಂದಕ್ಕೆ ಹಂಸರೂಪೀ ಪರಮಾತ್ಮನು ತನ್ನ ನಾಭಿಕಮಲದಿಂದ ಉದ್ಭೂತನಾದ ಚತುರ್ಮುಖ ಬ್ರಹ್ಮನಿಗೆ ಧನುರ್ಮಾಸದ ಶ್ರೇಷ್ಠ ಮಹಾತ್ಮ್ಯೆಯನ್ನು ತಿಳಿಸಿದ್ದನು. ಶ್ರೀಹರಿಯಿಂದ ಹೇಳಲ್ಪಟ್ಟ ಈ ಮಹಾತ್ಮ್ಯೆಯನ್ನು ಯಾವನು ಭಕ್ತಿಯಿಂದ ಕೇಳುವನೋ ಅವನು ತನ್ನೆಲ್ಲ ಪಾಪಗಳಿಂದ ಮುಕ್ತನಾಗುವನು. ॥೨೨॥

"ಇಲ್ಲಿಗೆ ಪಂಚರಾತ್ರಾಗಮದಲ್ಲಿ ಉಕ್ತವಾದ ಧನುರ್ಮಾಸ ಮಹಾತ್ಮ್ಯೆಯಲ್ಲಿ 'ನಿತ್ಯವಿಧಿಗಳು' ಎಂಬ ಮೊದಲನೆಯ ಅಧ್ಯಾಯವು ಸಮಾಪ್ತವಾಯಿತು. ॥ಶ್ರೀ ಕೃಷ್ಣಾರ್ಪಣಮಸ್ತು॥

ಅಧ್ಯಾಯ-೨

ರಾಜನಿಗೆ ವಿಷ್ಣುಲೋಕಪ್ರಾಪ್ತಿ

ಬ್ರಹ್ಮೋವಾಚ—

ಧನುರ್ಮಾಸೇ ಹರೇಃಪೂಜಾ ಕಥಂ ಕಾರ್ಯಾ ಸುರೋತ್ತಮ ।
ಏತದ್ವಿಸ್ತರತೋ ಬ್ರೂಹಿ ಮಯಿ ಚೇದಸ್ತಿ ತೇ ದಯಾ ॥೧॥

ಹಂಸ ಉವಾಚ—

ಚಾಪಸ್ಥೇ ಚ ಯದಾ ಭಾನೌ ಸರ್ವಾನ್ ಕಾಮಾನ್ವಿಹಾಯ ಚ ।
ಸೂರ್ಯೋದಯೇ ಸಮಾಪ್ಯಾಥ ನಿತ್ಯಕರ್ಮ ಯಥಾವಿಧಿ ॥೨॥
ಬ್ರಾಹ್ಮಣಾನ್ ಭೋಜಯಿತ್ವಾಥ ಸ್ಮರೇತ್ ದೇವಕಿನಂದನಂ ।
ಪಶ್ಚಾಜ್ಜಪಾದಿಕಂ ಕಾರ್ಯಂ ನ ದೋಷೋ ಭೋಜನೇ ಕೃತೇ ॥೩॥

"ಭೋ ದೇವದೇವೋತ್ತಮಾ, ಶ್ರೀಹರೇ, ನನ್ನಲ್ಲಿ ನಿನಗೆ ಕರುಣೆ ಇದ್ದರೆ ಧನುರ್ಮಾಸದಲ್ಲಿ ದೇವಪೂಜೆಯನ್ನು ಮಾಡುವ ಕ್ರಮವನ್ನು ವಿಸ್ತಾರವಾಗಿ ತಿಳಿಸಿ ಅನುಗ್ರಹಿಸಬೇಕು" ಎಂದು ಚತುರ್ಮುಖ ಬ್ರಹ್ಮನು ಪ್ರಾರ್ಥಿಸಲು ॥೧॥ ಹಂಸರೂಪೀ ಪರಮಾತ್ಮನು ಹೇಳಿದನು- ಹೇ ಬ್ರಹ್ಮಾ, ಸೂರ್ಯನು ಧನುರಾಶಿಯಲ್ಲಿರುವ ಧನುರ್ಮಾಸದಲ್ಲಿ ಸರ್ವಕಾಮಗಳನ್ನು ತ್ಯಜಿಸಿದವನಾಗಿ ಪ್ರತಿ ದಿನದ ಆಹ್ನಿಕ ಕರ್ಮಗಳನ್ನು ದೇವ ಪೂಜಾದಿಗಳನ್ನು ಸೂರ್ಯೋದಯಕ್ಕೆ ಸರಿಯಾಗಿ ಮಾಡಿ ಮುಗಿಸಿ ॥೨॥ ನಂತರ ಬ್ರಾಹ್ಮಣರಿಗೆ ಭೋಜನ ಮಾಡಿಸಬೇಕು. ಶ್ರೀಹರಿಯ ಧ್ಯಾನ ಮಾಡಬೇಕು. ಈ ಮಾಸದೊಳಗೆ ಭೋಜನಾನಂತರದಲ್ಲಿ ಜಪಾದಿಗಳನ್ನು ಮಾಡಿದರೂ ಯಾವ ದೋಷವೂ ಇಲ್ಲ. ॥೩॥ ಇದನ್ನು ಕೇಳಿದ ಚತುರ್ಮುಖ ಬ್ರಹ್ಮನು-

ಬ್ರಹ್ಮೋವಾಚ॥

ಸೂರ್ಯೋದಯಾತ್ಪೂರ್ವಮೇವ ಕಥಂ ಕಾರ್ಯಂ ತು ಆಹ್ನಿಕಮ್।
ಮಮೈತತ್ಸಂಶಯಂ ಛಿಂಧಿ ಸರ್ವಜ್ಞೋಽಸಿ ಮಹಾಮತೇ ॥೪॥

ಹಂಸ ಉವಾಚ—

ಯಥಾ ಸ್ನಾನಂ ಯಥಾ ಸಂಧ್ಯಾ ತಥಾ ಶ್ರಾದ್ಧಾದಿಕಾಃ ಕ್ರಿಯಾಃ।
ತಥೈವ ಚ ದನುರ್ಮಾಸೇ ಪೂಜಾ ಕಾರ್ಯಾ ಹರೇಸ್ಸದಾ ॥೫॥

ಮಾಸಪೂಜಾಮಶಕ್ತಸ್ತು ಕಾಲೇ ಕಾಲೇ ಚ ಪಂಕಜ ।
ಅರ್ಕವಾರೇ ವ್ಯತೀಪಾತೇ ವೈಷ್ಣವೇನ ಚ ಸಂಯುತೇ ॥೬॥

ತದ್ದಿನೇ ಚ ಹರೇಃ ಪೂಜಾ ಯಥಾವಿತ್ತಾನುಸಾರತಃ ।
ಕೃಷ್ಣಪಕ್ಷೇ ಕೃತಾ ಪೂಜಾ ಪಿತೃಣಾಂ ತೃಪ್ತಿದಾ ಭವೇತ್ ॥೭॥

ಮಹಾಮತೆ ಶ್ರೀಹರೇ, ಸೂರ್ಯೋದಯಕ್ಕಿಂತ ಮೊದಲೇ ಸಂಧ್ಯಾವಂದನಾದಿ ನಿತ್ಯಾಹ್ನಿಕ ಕರ್ಮಗಳನ್ನು ಮಾಡುವುದು ಹೇಗೆ ? ನನಗೇಕೋ ಈ ವಿಷಯದಲ್ಲಿ ಸಂದೇಹವಿದೆ. ಸರ್ವಜ್ಞನಾಗಿರುವ ನೀನು ನನ್ನ ಈ ಸಂದೇಹವನ್ನು ನಿವಾರಿಸು ಪ್ರಭೋ ಎಂದು ಪ್ರಾರ್ಥಿಸಲು ॥೪॥ ಹಂಸರೂಪೀ ಪರಮಾತ್ಮನು ಹೇಳಿದನು- ಹೇ ಬ್ರಹ್ಮ, ಧನುರ್ಮಾಸದಲ್ಲಿ ಪ್ರತಿದಿನ ಸೂರ್ಯೋದಯಕ್ಕಿಂತ ಪೂರ್ವದಲ್ಲಿ ಸ್ನಾನ ಸಂಧ್ಯಾದಿಗಳನ್ನು ಮಾಡುವಂತೆ, ಶ್ರಾದ್ಧಾದಿ ಕ್ರಿಯೆಗಳನ್ನು ಮಾಡುವುದರಿಂದ ಯಾವ ದೋಷವೂ ಇಲ್ಲ. ಇದರಂತೆ ದೇವಪೂಜೆಯನ್ನು ಮಾಡಬೇಕು. ।೫॥ ಹೇ ಬ್ರಹ್ಮ, ಧನು ರ್ಮಾಸ ಪೂರ್ತಿ ಪ್ರತಿದಿನ ಈ ರೀತಿ ದೇವ ಪೂಜಾದಿಗಳನ್ನು ಮಾಡಲು ಅಶಕ್ತನಾದವನು, ಭಾನುವಾರ, ವ್ಯತೀಪಾತ ಮುಂತಾದ ವಿಶಿಷ್ಟ ದಿನಗಳಲ್ಲಿಯಾದರೂ ಮಾಡಬೇಕು. ।೬॥ ಅಂಥ ವಿಶಿಷ್ಟ ದಿನಗಳಲ್ಲಿ ತನ್ನ ಸ್ವಶಕ್ತ್ಯನುಸಾರವಾಗಿ ಶ್ರೀಹರಿಯ ಪೂಜೆಯನ್ನು ಭಕ್ತಿಯಿಂದ ಮಾಡಬೇಕು. ಕೃಷ್ಣಪಕ್ಷದಲ್ಲಿ ಮಾಡುವ ದೇವಪೂಜೆಯು ಪಿತೃಗಳಿಗೆ ತೃಪ್ತಿದಾಯಕವಾಗಿರುತ್ತದೆ. ॥೭।। ಹಾಗೂ ಶುಕ್ಲಪಕ್ಷದಲ್ಲಿಯ ದೇವಪೂಜೆಯು

ಶುಕ್ಲಪಕ್ಷೇ ಕೃತಾ ಪೂಜಾ ದೇವಾನಾಂ ಹರ್ಷದಾ ಭವೇತ್।
ಕುಟುಂಬಭೋಜನಂ ಕಾರ್ಯಂ ಉಷಃಕಾಲೇ ಚ ಕಂಜಜ ||೮||

ಕುಟುಂಬಭೋಜನಾಶಕ್ತಃ ದಂಪತೀಂ ಭೋಜಯೇತ್ತತಃ।
ತೇನೈವ ಸರ್ವಪಾಪಾನಿ ಹಿಮವದ್ಭಾಸ್ಕರೋದಯೇ ||೯||

ಅತ್ರೈವೋದಾಹರಂತೀಮಮಿತಿಹಾಸಂ ಪುರಾತನಂ।
ಶ್ರೋತೃಣಾಂ ಪರಮೈಶ್ವರ್ಯಂ ವಕ್ತೃಣಾಮಘನಾಶನಂ ||೧೦||

ರೇವಾತೀರೇ ಪುರಾ ರಾಜಾ ಸತ್ಯಸಂಧ ಇತೀರಿತಃ।
ಪರಸ್ತ್ರೀಲೋಲುಪೋ ನಿತ್ಯಂ ತದರ್ಥಂ ಬಹುಯತ್ನವಾನ್ ||೧೧||

ದೇವತೆಗಳಿಗೆ ಹರ್ಷದಾಯಕವಿರುತ್ತದೆ. ಹೇ ಬ್ರಹ್ಮಾ, ಉಷಃಕಾಲದಲ್ಲಿ ಬ್ರಾಹ್ಮಣ ಕುಟುಂಬ ಭೋಜನವನ್ನು ಮಾಡಿಸಬೇಕು ||೮|| ಕುಟುಂಬ ಭೋಜನ (ಕುಟುಂಬದಲ್ಲಿರುವ ಎಲ್ಲರಿಗೂ ಭೋಜನ) ಸಾಧ್ಯವಾಗದಿದ್ದರೆ, ಬ್ರಾಹ್ಮಣ ದಂಪತೀ ಭೋಜನವನ್ನಾದರೂ ಮಾಡಿಸಬೇಕು. ಇಷ್ಟು ಮಾಡುವ ಮಾತ್ರದಿಂದಲೇ, ಸೂರ್ಯೋದಯದಲ್ಲಿ ಹಿಮವು ಕರಗಿ ಹೋಗುವಂತೆ, ಸರ್ವ ಪಾಪಗಳು ನಾಶವಾಗಿ ಹೋಗುವವು. ||೯|| ಈ ವಿಷಯವು ಮನದಟ್ಟಾಗುವಂತೆ ತಿಳಿಸುವುದಕ್ಕಾಗಿ, ಜ್ಞಾನಿಗಳು ಒಂದು ಪುರಾತನ ಇತಿಹಾಸ ಘಟನೆಯನ್ನು ಉದಾಹರಿಸುತ್ತಾರೆ. ಬ್ರಹ್ಮಾ, ಈ ಇತಿಹಾಸ ಘಟನೆಯನ್ನು ಕೇಳುವವರಿಗೆ ಪರಮೈಶ್ವರ್ಯಪ್ರಾಪ್ತಿಯೂ ಹೇಳುವವರ ಪಾಪನಾಶವೂ ಆಗುವವು. ||೧೦|| ಅದನ್ನು ನಿನಗೀಗ ತಿಳಿಸುವೆನು ಕೇಳು- ಹಿಂದಕ್ಕೆ ರೇವಾತೀರದಲ್ಲಿ 'ಸತ್ಯಸಂಧ' ಎಂಬ ಹೆಸರಿನ ಒಬ್ಬ ರಾಜನಿದ್ದನು. ನಿತ್ಯದಲ್ಲಿಯೂ ಪರಸ್ತ್ರೀ ಲೋಲುನಾಗಿರುತ್ತಿದ್ದ ಅವನು ಪರಸ್ತ್ರೀಯನ್ನು ಹಿಡಿದು ತರಲು ನಾನಾ ರೀತಿಯ ಉಪಾಯಗಳನ್ನು ಮಾಡುತ್ತಲಿದ್ದನು. ||೧೧||

ತಸ್ಯೈವ ನಗರೇ ವಿದ್ವಾನ್ ವೇದಶಾಸ್ತ್ರವಿಶಾರದಃ ।
ನಾಮ್ನಾ ನಾರಾಯಣ ಇತಿ ನಿತ್ಯಕರ್ಮಸು ಲೋಲುಪಃ ||೧೨||

ಅಕಸ್ಮಾದ್ಧನುಷೋ ಮಾಸಃ ದೈವೇಚ್ಛಾದಾಗತಸ್ತದಾ ।
ಪುಣ್ಯಕಾಲಂ ತದಾ ವೀಕ್ಷ್ಯ ಬ್ರಾಹ್ಮಣಾ ಹರ್ಷಮಾಗತಾಃ ||೧೩||

ದೇವಪೂಜಾಂ ತಥಾ ಚಕ್ರುಃ ಸ್ವೇ ಸ್ವೇ ಗೇಹೇ ನಿರಂತರಂ ।
ಅರುಣೋದಯವೇಲಾಯಾಂ ಸ್ನಾತ್ವಾ ಚೈವ ಯಥಾವಿಧಿ ||೧೪||

ಚಿತ್ರಾನ್ನಂ ನವನೀತಂ ಚ ಭಕ್ಷ್ಯೈರ್ನಾನಾವಿಧೈರಪಿ ।
ಶಾಕೈಶ್ಚ ವಿವಿಧೈಶ್ಚೈವ ಚೋಷ್ಯೈಃ ಖಾದ್ಯೈಃ ಸಮನ್ವಿತಂ ||೧೫||

ಆ ರಾಜನ ನಗರದಲ್ಲಿಯೇ 'ನಾರಾಯಣ' ಎಂಬ ಹೆಸರಿನ ಒಬ್ಬ ಬ್ರಾಹ್ಮಣ ವಿದ್ವಾಂಸನಿದ್ದನು. ಅವನು ವೇದ ಶಾಸ್ತ್ರಗಳನ್ನು ಚೆನ್ನಾಗಿ ಬಲ್ಲವನೂ, ನಿತ್ಯಕರ್ಮಗಳಲ್ಲಿ ಆಸಕ್ತನಾದ ಕರ್ಮಠನೂ ಆಗಿದ್ದನು. ||೧೨|| ಹೀಗಿರುತ್ತಿರಲು ಒಮ್ಮೆ ದೈವೇಚ್ಛೆಯಿಂದ ಪ್ರತಿವರ್ಷದಂತೆ ಧನುರ್ಮಾಸವು ಪ್ರಾಪ್ತವಾಯಿತು. ಇಂಥ ಪುಣ್ಯಕಾಲವು ಪ್ರಾಪ್ತವಾಗಲು ಬ್ರಾಹ್ಮಣರೆಲ್ಲರೂ ಹರ್ಷಭರಿತರಾದರು. ||೧೩|| ಪ್ರತಿದಿನ ಯಥಾವಿಧಿ ಪ್ರಾತರ್ವಿಧಿ, ಸ್ನಾನಾಹ್ನಿಕ ಕರ್ಮಗಳನ್ನು ಮುಗಿಸಿ ತಮ್ಮ ತಮ್ಮ ಮನೆಗಳಲ್ಲಿ ಅರುಣೋದಯಸಮಯಕ್ಕೆ ಸರಿಯಾಗಿ ದೇವಪೂಜೆಯನ್ನು ಮಾಡಿ ಮುಗಿಸತೊಡಗಿದರು. ||೧೪|| ಪೂಜಾ ಸಮಯದಲ್ಲಿ, ಶ್ರೀ ಹರಿಗೆ ಚಿತ್ರಾನ್ನ, ನವನೀತ, ನಾನಾವಿಧ ಭಕ್ಷ್ಯಗಳು, ವಿವಿಧ ಕಾಯಿಪಲ್ಯೆಗಳು, ಚೋಷ್ಯ ಖಾದ್ಯಗಳನ್ನು ನಿವೇದಿಸತೊಡಗಿದರು. ||೧೫|| ಪೂಜಾ

ಬ್ರಾಹ್ಮಣಾನ್ ಭೋಜಯಿತ್ವಾಥ ಸ್ವಯಂ ಭುಕ್ತ್ವಾ ತತಃ ಪರಂ ।
ತಾಂಬೂಲಂ ದಕ್ಷಿಣಾಂ ದತ್ವಾ ಆಶೀರ್ವಾದಾನ್ ಗೃಹೀತ್ಯ ಚ ॥೧೬॥

ಏತತ್ ಶುಶ್ರಾವ ರಾಜೋಽಪಿ ಸ್ವರಾಷ್ಟ್ರೇ ಚ ಮಹೋತ್ಸವಂ ।
ಸ್ವಯಂ ಕರ್ತುಂ ಮನಶ್ಚಕ್ರೇ ವಿಪ್ರಂ ಕಂ ಚ ನಿಯಂತ್ರಯೇ ॥೧೭॥

ವಿಚಾರ್ಯ್ಯ ಚೈವ ಪಶ್ಚಾಚ್ಚ ಗ್ರಾಮೇ ನಾರಾಯಣಾಹ್ವಯಂ ।
ಪೌರಾಣಿಕಂ ಚ ಗ್ರಾಮಸ್ಥಂ ವೇದವೇದಾಂಗಪಾರಗಂ ॥೧೮॥

ನಿಮಂತ್ರಣಾರ್ಥಂ ವಿಪ್ರರ್ಷೇ ರಾಜಾ ಗತ್ವಾ ಮಹಾತ್ಮನಃ ।
ಮಂದಿರಂ ಚ ತದಾ ದೃಷ್ಟ್ವಾ ಶಿಷ್ಯೈಃ ಶತಸಮನ್ವಿತಂ ॥೧೯॥

ನಂತರ ಬ್ರಾಹ್ಮಣರಿಗೆ ಭೋಜನ ಮಾಡಿಸಿ ನಂತರ ತಾವು ಊಟ ಮಾಡಿದರು. ಬ್ರಾಹ್ಮಣರಿಗೆ ತಾಂಬೂಲ ದಕ್ಷಿಣಾದಿಗಳನ್ನು ಕೊಟ್ಟು ಅವರಿಂದ ಆಶೀರ್ವಾದಗಳನ್ನು ಪಡೆದರು. ।।೧೬।। ಇದನ್ನೆಲ್ಲ ಕೇಳಿದ ರಾಜನು ತನ್ನ ರಾಷ್ಟ್ರದಲ್ಲಿ (ಮನೆಯಲ್ಲಿ)ಯೂ ಧನುರ್ಮಾಸ ಮಹೋತ್ಸವವನ್ನು ನಡೆಸಲು ನಿರ್ಧರಿಸಿ 'ಭೋಜನಕ್ಕೆ ಯಾವ ಬ್ರಾಹ್ಮಣನನ್ನು ಆಮಂತ್ರಿಸಲಿ? ॥೧೭॥ ಎಂದು ಆಲೋಚಿಸ ತೊಡಗಿದನು. ತನ್ನ ಗ್ರಾಮದವನೇ ಆದ, ಪೌರಾಣಿಕನೂ ವೇದ ವೇದಾಂಗಗಳನ್ನು ಬಲ್ಲವನೂ ಆದ ನಾರಾಯಣ ಬ್ರಾಹ್ಮಣನನ್ನು ಭೋಜನಕ್ಕೆ ಆಮಂತ್ರಿಸುವದೆಂದು ನಿರ್ಧರಿಸಿ ॥೧೮॥ ರಾಜನು ನಿಮಂತ್ರಿಸಲು ಸ್ವತಃ ಆ ಬ್ರಾಹ್ಮಣನ ಮಂದಿರಕ್ಕೆ ಹೋದನು. ನೂರಾರು ಶಿಷ್ಯರಿಂದ ಯುಕ್ತನಾಗಿರುವ ಆ ಬ್ರಾಹ್ಮಣನನ್ನು ನೋಡಿದ ರಾಜನು ॥೧೯॥ ಅವನು ಹೇಳುತ್ತಿರುವ

ಧನುರ್ಮಾಸಸ್ಯ ಮಾಹಾತ್ಮ್ಯಂ ಶ್ರೋತೄಣಾಮಘನಾಶನಂ |
ಶುಶ್ರಾವ ಮಾಸಮಾಹಾತ್ಮ್ಯಂ ದಂಪತೀಭೋಜನಾದಿಕಂ ||೨೦||

ವಸ್ತ್ರಾಲಂಕಾರದಾನಂ ಚ ಬ್ರಾಹ್ಮಣಾರ್ಥಪ್ರದಾಪನಂ |
ವಿಶಾಲಾಕ್ಷೀಂ ಪೃಥುತಟೀಂ ಘನೀಭೂತಪಯೋಧರಾಂ ||೨೧||

ಸಿಂಹಮಧ್ಯಸಮಾಂ ದೃಷ್ಟ್ವಾ ಸದ್ಯೋ ಮೋಹವಶಂ ಗತಃ |
ಬಹ್ವೀರ್ದಾರಾಃ ಪುರಸ್ಕೃತ್ಯ ಸಭಾರ್ಯಂ ಚ ದ್ವಿಜೋತ್ತಮಂ ||೨೨||

ಭೋ ಬ್ರಹ್ಮನ್ ಮಾಸಪರ್ಯಂತಂ ಸಪತ್ನೀಕಂ ದ್ವಿಜೋತ್ತಮಂ |
ರಾತ್ರೌ ಸ್ವಾಪಂ ಮಮ ಗೃಹೇ ಕೃತ್ವಾ ಚೈವ ವಿಧಾನತಃ ||೨೩||

ಧನುರ್ಮಾಸದ ಮಹಾತ್ಮ್ಯೆಯನ್ನು ಕೇಳಿದನು. ಶ್ರೋತೃಗಳ ಪಾಪಪರಿಹಾರಕವಾದ ಆ ಮಹಾತ್ಮ್ಯೆಯಲ್ಲಿ ಬಂದ ದಂಪತೀ ಭೋಜನಾದಿಗಳು ॥೨೦॥ ಬ್ರಾಹ್ಮಣರಿಗೆ ವಸ್ತ್ರಾಲಂಕಾರ ದಾನ ಮುಂತಾದವುಗಳನ್ನು ಶ್ರದ್ಧೆಯಿಂದ ಕೇಳಿ ತಿಳಿದನು. ಅಷ್ಟರಲ್ಲಿ ಅಲ್ಲಿಯೇ ಇದ್ದ ವಿಸ್ತೃತ ನಿತಂಬಗಳಿಂದಲೂ, ಘನೀಭೂತ ಕುಚಗಳಿಂದಲೂ, ॥೨೧॥ ಸಿಂಹದ ಮಧ್ಯಭಾಗದಂತಿರುವ ಬಳಕುವ ಕಟಿಯಿಂದಲೂ ಶೋಭಿಸುತ್ತಿರುವ ವಿಶಾಲಾಕ್ಷಿಯಾದ ಬ್ರಾಹ್ಮಣನ ಪತ್ನಿಯನ್ನು ಕಂಡು ರಾಜನು ಅವಳಲ್ಲಿ ಮೋಹವಶನಾದನು. ಭಾರ್ಯೆಯಿಂದ ಸಹಿತನಾಗಿದ್ದ ಆ ನಾರಾಯಣ ಬ್ರಾಹ್ಮಣನನ್ನು ಪ್ರಶಂಸಾಪರವಾದ ವಿವಿಧ ಮಾತುಗಳಿಂದ ಸತ್ಕರಿಸಿ ರಾಜನು ॥೨೨॥ "ಭೋ ದ್ವಿಜವರ್ಯ, ಈ ಧನುರ್ಮಾಸ ಪೂರ್ತಿ ನಿತ್ಯ ಒಬ್ಬ ಸಪತ್ನೀಕ ಬ್ರಾಹ್ಮಣರನ್ನು ನನ್ನ ಅರಮನೆಯಲ್ಲಿ ಪೂಜಿಸಿ ಭೋಜನ ಮಾಡಿಸಬೇಕೆಂದು ಸಂಕಲ್ಪಿಸಿದ್ದೇನೆ. ಆದ್ದರಿಂದ ನಾಳೆಗೆ ನೀವು ದಂಪತಿಗಳು ಬರಬೇಕು. ಈ ರಾತ್ರಿ ಅಲ್ಲಿಯೇ ಮಲಗಬೇಕು ಎಂದು ಮುಂತಾಗಿ ತಿಳಿಸಿ ॥೨೩॥ ತನ್ನ ಅರಮನೆಗೆ

ಗೃಹಂ ಜಗಾಮ ತಚ್ಚಿತ್ತಃ ಕದಾ ಸಾಯಂ ಭವೇದಿತಿ ।
ಭಾನೌ ಅಸ್ತಮಯೇ ಜಾತೇ ಸಪತ್ನೀಕಂ ದ್ವಿಜೋತ್ತಮಂ ||೨೪||

ಆಹ್ವಯಮಾಸ ದೂತೇನ ರಥಂ ದತ್ವಾ ಗೃಹಂ ಪ್ರತಿ ।
ಬ್ರಾಹ್ಮಣಸ್ತು ತದಾ ದೃಷ್ಟ್ವಾ ರಾಜದೂತಂ ಸಮಾಗತಂ ||೨೫||

ಜಗಾಮ ತ್ವರಯಾ ಬ್ರಹ್ಮನ್ ಭಾರ್ಯಯಾ ರಾಜಮಂದಿರಂ ।
ವಿಪ್ರಂ ದೃಷ್ಟ್ವಾ ಸಪತ್ನೀಕಂ ತದಾ ರಾಜಾಽಬ್ರವೀದಿದಂ ॥೨೬॥

ಪ್ರಾಸಾದೇ ಶಯನಂ ಕಾರ್ಯಂ ಸ್ತ್ರಿಯಾ ಸಹ ಮಹಾಮುನೇ ।
ಇತ್ಯುಕ್ತೋ ಆರುರೋಹಾಥ ಪ್ರಾಸಾದಂ ಸೋಜ್ವಲಂ ಕೃತಂ ॥೨೭॥

ತಿರುಗಿ ಬಂದನು. ಬ್ರಾಹ್ಮಣ ಪತ್ನಿಯಲ್ಲಿಯೇ ಮನಸ್ಸಿಟ್ಟ ರಾಜನು ಯಾವಾಗ ಸಂಜೆಯಾದೀತೋ ಎಂದು ವಿಚಾರಿಸುತ್ತ ಸೂರ್ಯಾಸ್ತವಾದೊಡನೆಯೇ ಸಪತ್ನೀಕ ಬ್ರಾಹ್ಮಣನನ್ನು ॥೨೪॥ ಕರೆತರಲು ಸೂತನೊಂದಿಗೆ ರಥವನ್ನು ಕೊಟ್ಟು ಕಳುಹಿಸಿದನು. ಕುಟಿಲವನ್ನರಿಯದ ಈ ಸಾತ್ವಿಕ ಬ್ರಾಹ್ಮಣನು ತನ್ನ ಮನೆಗೆ ರಾಜದೂತನು ರಥದೊಂದಿಗೆ ಬಂದಿರುವುದನ್ನು ಕಂಡು ॥೨೫॥ ಲಗುಬಗೆಯಿಂದ ತನ್ನ ಹೆಂಡತಿಯೊಂದಿಗೆ ರಾಜಮಂದಿರಕ್ಕೆ ಹೊರಟು ಬಂದನು. ಅರಮನೆಗೆ ಬಂದಿರುವ ಸಪತ್ನೀಕ ಬ್ರಾಹ್ಮಣನನ್ನು ಕಂಡು ರಾಜನು ತನ್ನ ದೂತನಿಗೆ– ಈ ಮಹಾಮುನಿಗೂ ಹಾಗೂ ಅವನ ಪತ್ನಿಗೂ ಮಲಗಿಕೊಳ್ಳಲು ಅರಮನೆಯಲ್ಲಿ ತಕ್ಕ ವ್ಯವಸ್ಥೆಯನ್ನು ಮಾಡುವಂತೆ ತಿಳಿಸಿದನು. ರಾಜನಿಂದ ಈ ರೀತಿ ತಿಳಿಸಲ್ಪಟ್ಟ ಬ್ರಾಹ್ಮಣನು ಪ್ರಾಸಾದದ ಮೆಟ್ಟಲುಗಳನ್ನೇರಿ ದೀಪಗಳಿಂದ ಪ್ರಜ್ವಲಿಸುತ್ತಿರುವ ಪ್ರಾಸಾದದ ಕೊಠಡಿಯೊಂದರಲ್ಲಿ ||೨೬||,||೨೭॥ ತನ್ನ ಪತ್ನಿಯೊಂದಿಗೆ ಸ್ವಚ್ಛಂದವಾಗಿ ಮಲಗಿಕೊಂಡನು. ಬ್ರಾಹ್ಮಣ ಪತ್ನಿಯ ದೇಹಸಂಗ ಮಾಡುವ ಉದ್ದೇಶದಿಂದ ನಡುರಾತ್ರಿ ಎಚ್ಚೆತ್ತ ರಾಜನು ॥೨೮|| ಅವಳು ಮಲಗಿರುವ

ಕ್ಷುತ್ಕ್ಷಾಮ ಭಾರ್ಯಯಾ ಸಾಕಂ ಸ್ವೇಚ್ಛಯಾ ವಿಪ್ರಸತ್ತಮಃ ।
ವಿಶಾಯಾಮುತ್ಥಿತೋ ರಾಜಾ ಬ್ರಾಹ್ಮಣ್ಯಾ ಸಂಗತಾರ್ಯತಃ ॥೨೮॥

ಆಜಗಾಮ ಪಥೇ ಪಾದೇ ಸರ್ಪದಷ್ಟೋ ಯದೃಚ್ಛಯಾ ।
ಯಮದೂತಾಸ್ತದಾ ಜಗ್ಮುಃ ವಿಷ್ಣುದೂತಾಸ್ತಥೈವ ಚ ॥೨೯॥

ಯಮದೂತಾನ್ನಿರಾಕೃತ್ಯ ವಿಷ್ಣುದೂತಾಸ್ತದಾಬ್ರುವನ್ ।
ಅನೇನ ಧನುಷೋ ಮಾಸೇ ಬ್ರಾಹ್ಮಣೇ ಚ ನಿಮಂತ್ರಿತೇ ||೩೦||

ತೇನ ಪುಣ್ಯಪ್ರಭಾವೇನ ವಿಷ್ಣುಲೋಕಮವಾಪ್ತವಾನ್ ।
ಸಪತ್ನೀಕಂ ಬ್ರಾಹ್ಮಣಂ ತು ಏಕಂ ಯೋ ಭೋಜ-
ಯೇತ್ಸದಾ ||೩೧||

ಕೋಲಿಡಿಯತ್ತ ಮೆಲ್ಲನೇ ನಡೆಯುತ್ತ ಬಂದನು. ಆದರೆ ಮಾರ್ಗದಲ್ಲಿ ದೈವೇಚ್ಛೆಯಿಂದ ಒಂದು ಸರ್ಪದಿಂದ ಕಚ್ಚಲ್ಪಟ್ಟು ರಾಜನು ಮೃತನಾದನು. ಆಗ ಅವನನ್ನು ಯಮಲೋಕಕ್ಕೆ ಎಳೆದೊಯ್ಯಲು ಯಮದೂತರೂ ವಿಷ್ಣು ಲೋಕಕ್ಕೆ ಕರೆದೊಯ್ಯಲು ವಿಷ್ಣುದೂತರೂ ಏಕಕಾಲಕ್ಕೆ ಅಲ್ಲಿ ಆಮಿಸಿದರು. ।।೨೯।। ಬಂದಿರುವ ಯಮದೂತರನ್ನು ದೂರ ಕಳುಹಿಸಿ ವಿಷ್ಣುದೂತರು ಹೇಳಿದರು- ಭೋ ಯಮದೂತರೇ, ಇವನು ಧನು-ರ್ಮಾಸದಲ್ಲಿ ಭೋಜನಕ್ಕೆಂದು ಆ ಬ್ರಾಹ್ಮಣ ದಂಪತಿಗಳನ್ನು ಆಮಂತ್ರಿಸುವ ಮಾತ್ರದಿಂದಲೇ ||೩೦|| ಸಾಕಷ್ಟು ಪುಣ್ಯವನ್ನು ಸಂಪಾದಿಸಿದ್ದಾನೆ. ಆ ಪುಣ್ಯ ಪ್ರಭಾವದಿಂದ ಈ ರಾಜನು ವಿಷ್ಣುಲೋಕವನ್ನು ಹೊಂದಲು ಅರ್ಹನಾಗಿದ್ದಾನೆ. ಸಪತ್ನೀಕನಾದ ಒಬ್ಬ ಬ್ರಾಹ್ಮಣನಿಗೆ ಈ ಮಾಸದಲ್ಲಿ ಯಾರು ಭೋಜನಮಾಡಿಸುತ್ತಾರೋ ॥೩೧॥ ಅವರ

ತಸ್ಯ ಪುಣ್ಯಸ್ಯ ವಿಸ್ತಾರಂ ಕಃ ಶಕ್ತೋ ದಿವಿ ವಾ ಭುವಿ ।
ಇತ್ಯುಕ್ತಾಃ ಪ್ರಯಯುರ್ದೂತಾಃ ವಿಷ್ಣುಲೋಕಮಮರ್ಷಣಂ॥೩೨॥
ತಸ್ಮಾಚ್ಚ ಧನುಷೋ ಮಾಸಃ ಸರ್ವಪುಣ್ಯಪ್ರದಾಯಕಃ ॥೩೩॥

॥ಇತಿ ಶ್ರೀಪಂಚರಾತ್ರಾಗಮೇ ಬ್ರಹ್ಮಹಂಸಸಂವಾದೇ
ದ್ವಿತೀಯೋಽಧ್ಯಾಯಃ॥

। ಶ್ರೀಕೃಷ್ಣಾರ್ಪಣಮಸ್ತು ।

ಪುಣ್ಯದ ಮಿತಿಯನ್ನು ವರ್ಣಿಸಲು ಸ್ವರ್ಗಲೋಕದಲ್ಲಾಗಲೀ ಈ ಭೂಲೋಕದಲ್ಲಾಗಲೀ ಆದಾರು ಶಕ್ತರಾದಾರು ? ಹೀಗೆಂದು ತಿಳಿಸುತ್ತ ವಿಷ್ಣುದೂತರು ಆ ರಾಜನನ್ನು ಪವಿತ್ರವಾದ ವಿಷ್ಣುಲೋಕಕ್ಕೆ ಕರೆದೊಯ್ದರು. ॥೩೨॥ ಹೇ ಬ್ರಹ್ಮಾ ಈ ಕಾರಣದಿಂದ ಧನುರ್ಮಾಸವು ಬಹು ಪುಣ್ಯಪ್ರದವಾಗಿದೆ ॥೩೩॥.

॥ಇಲ್ಲಿಗೆ ಪಂಚರಾತ್ರಾಗಮದಲ್ಲಿ ಬ್ರಹ್ಮ-ಹಂಸ ಸಂವಾದದಲ್ಲಿ ಉಕ್ತವಾದ ಧನುರ್ಮಾಸ ಮಹಾತ್ಮೆಯಲ್ಲಿ "ರಾಜನಿಗೆ ವಿಷ್ಣುಲೋಕಪ್ರಾಪ್ತಿ" ಎಂಬ ಎರಡನೆಯ ಅಧ್ಯಾಯವು ಸಮಾಪ್ತವಾಯಿತು.

॥ ಶ್ರೀ ಕೃಷ್ಣಾರ್ಪಣಮಸ್ತು ॥

ಅಧ್ಯಾಯ-೩

ಧನುರ್ಮಾಸದ ವಿವಿಧ ದಾನಗಳು

ಬ್ರಹ್ಮೋವಾಚ—

ಧನುರ್ಮಾಸೇ ಹರೇಃ ಪೂಜಾ ಕಥಂ ಕಾರ್ಯಾ ಪುರೋತ್ತಮ ॥೧॥

ಹಂಸ ಉವಾಚ—

ಆಲಸ್ಯಾದ್ಯದಿ ಲೋಭಾದ್ವಾ ನ ಕರೋತಿ ನರಾಧಮಃ ।
ರೌರವಂ ನರಕಂ ಯಾತಿ ಯಾವದಿಂದ್ರಾಶ್ಚತುರ್ದಶ ।
ಆತ್ಮಹಾ ಸ ತು ವಿಜ್ಞೇಯಃ ದರಿದ್ರೋ ಹಿ ನ ಸಂಶಯಃ ॥೨॥

"ಹೇ ಅಖಿಲಾಂಡಕೋಟಿ ಬ್ರಹ್ಮಾಂಡ ನಾಯಕಾ, ದೇವ ದೇವೋತ್ತಮಾ, ದೇವಶಿಖಾಮಣೀ, ಧನುರ್ಮಾಸದಲ್ಲಿ ದೇವಪೂಜೆಯನ್ನು ಹೇಗೆ ಮಾಡಬೇಕೆಂಬುದನ್ನು ತಿಳಿಸಿ ಅನುಗ್ರಹಿಸು" ಎಂದು ಚತುರ್ಮುಖ ಬ್ರಹ್ಮನು ಪ್ರಾರ್ಥಿಸಲು||೧|| ಹಂಸನಾಮಕ ಪರಮಾತ್ಮನು ಹೇಳಿದನು-ಚತು ರ್ಮುಖನೇ, ಮೊದಲು ನೈವೇದ್ಯ ಪದಾರ್ಥಗಳನ್ನು ಹಾಗೂ ಅವುಗಳ ನಿವೇ ದನೆಯಿಂದ ಬರುವ ಫಲಗಳನ್ನು ತಿಳಿಸುವೆನು. ಕೇಳು. ಆಲಸ್ಯದಿಂದಾಗಲೀ, ಲೋಭದಿಂದಾಗಲೀ(ದುಡ್ಡು,ಪದಾರ್ಥಗಳು ಖರ್ಚಾಗುವವು ಎಂಬ ಲೋಭ) ದೇವಪೂಜೆಯನ್ನು ಮಾಡದವನು ನರಾಧಮನೇ ಸರಿ. ಅವನು ಮರಣಾ ನಂತರ ರೌರವ ನರಕವನ್ನು ಹೊಂದಿ ಚತುರ್ದಶ ಇಂದ್ರರಿರುವವರೆಗೆ ಅಲ್ಲಿದ್ದು ಕ್ಲೇಶಬಡುವನು. ದೇವಪೂಜೆಯನ್ನು ಮಾಡದ ಆ ನರಾಧಮನು ಆತ್ಮ ಘಾತಿಗೆ ಸಮಾನನೂ (ಆತ್ಮಘಾತವೂ ಮಹಾ ಪಾಪಕರ್ಮವಾಗಿದೆ. ಅದರಂತೆ ದೇವಪೂಜೆ ಮಾಡದಿರುವದೂ ಮಹಾ ಪಾಪಕರ್ಮವಾಗಿದೆ. ಇವೆರಡಕ್ಕೂ ರೌರವ ನರಕವೇ ಫಲ),ದರಿದ್ರನೂ (ಐಹಿಕ ಪಾರತ್ರಿಕ ಐಶ್ವರ್ಯ

ಲಸಲ್ಲವಣಮಿಶ್ರಂ ಚ ಮರೀಚ್ಯಾದಿಸಮನ್ವಿತಂ ।
ಆರ್ದ್ರನಾಗರಸಂಯುಕ್ತಂ ಹಿಂಗಜಾದಿವಿಮಿಶ್ರಿತಂ ॥೩॥

ಯದ್ವಸ್ತು ಲಭ್ಯತೇ ಯೇನ ತದ್ದಾತವ್ಯಂ ದ್ವಿಜಾತಯೇ ।
ಯೇನೈವ ಸುಕೃತೀ ಲಬ್ಧ್ವಾ ವಿಷ್ಣುಲೋಕೇ ಮಹೀಯತೆ ॥೪॥

ಕೋಮಲೈಸ್ತಂಡುಲೈರ್ದಿವ್ಯೈಃ ಮುದ್ಗಾದ್ಯೈಶ್ಚ ವಿಮಿಶ್ರಿತಂ ।
ಪಾಕಾಂತೇ ಗೋಘೃತೈರ್ಯುಕ್ತಂ ಸರ್ವದ್ರವ್ಯೈಶ್ಚ ಸಂಯುತಂ ॥೫॥

ದ್ರವ್ಯಂ ಚ ದಂಧಿಖಂಡಂ ಚ ನವನೀತಂ ಶುಭಪ್ರದಂ ।
ತಾಂಬೂಲೈಃ ಕೋಮಲೈರ್ದಿವ್ಯೈಃ ಪುನ್ನಾಗೈಶ್ಚ ಸುಸಂಯುತಂ ॥೬॥

ಗಳಿಂದ ಪಂಚಿತನಾದವನೂ) ಎಂಬುವಲ್ಲಿ ಸಂದೇಹವಿಲ್ಲ. ॥೨॥ ಶುಭ್ರವಾದ ಉಪ್ಪು, ಮೆಣಸು, ಹಸಿಶುಂಠಿ, ಇಂಗು ಇವೇ ಮೊದಲಾದವುಗಳಿಂದ ಮಿಶ್ರಿತವಾದ ಪದಾರ್ಥವನ್ನಾಗಲೀ ॥೩॥ ಅಥವಾ ಇವುಗಳಲ್ಲಿ ಯಾವ ಒಂದು ಪದಾರ್ಥವಿದ್ದರೂ ಅದನ್ನಾಗಲೀ ಬ್ರಾಹ್ಮಣನಿಗೆ ದಾನವಾಗಿ ಕೊಡಬೇಕು. ಇಂಥ ಪದಾರ್ಥಗಳ ದಾನದಿಂದಲೂ ಸತ್ಕಾರ್ಯವನ್ನು ಮಾಡಿದಂಥವನಾಗಿ ಪುಣ್ಯವನ್ನು ಪಡೆದು ಮರಣಾನಂತರ ವಿಷ್ಣುಲೋಕವನ್ನು ಹೊಂದಿ ಅಲ್ಲಿ ಸುಖದಿಂದ ಇರುವನು. ॥೪॥ ಶ್ರೇಷ್ಠಜಾತಿಯ ಅಕ್ಕಿ, ಉತ್ತಮ ಜಾತಿಯ ಹೆಸರು ಮೆಣಸು, ಲವಂಗ ಮುಂತಾದವುಗಳನ್ನು ಸೇರಿಸಿ ಚೆನ್ನಾಗಿ ಬೇಯಿಸಿದ ಮೇಲೆ ಅವರಲ್ಲಿ ಇತರ ಸುವಾಸಿತ ದ್ರವ್ಯಗಳನ್ನು ಹಾಗೂ ಗೋಘೃತವನ್ನು ಸೇರಿಸಿ ತಯಾರಿಸಿದ 'ಹುಗ್ಗಿ' (ಮುದ್ಗಾನ್ನ) ॥೫॥ ಗಟ್ಟಿಯಾದ ಕೆನೆ ಕೆನೆ ಮೊಸರು, ಸುವಾಸಿತ ಬೆಣ್ಣೆ ಇವುಗಳನ್ನು ಹಾಗೂ ಇತರ ಭಕ್ಷ್ಯಭೋಜ್ಯಗಳನ್ನು ಪರಮಾತ್ಮನಿಗೆ ನಿವೇದಿಸಿ ಸುಗಂಧಿತ ಅಡಿಕೆ ಕೋಮಲವಾದ ವೀಳ್ಯದೆಲೆ ಸಹಿತ ॥೬॥ ದಕ್ಷಿಣೆಯನ್ನು ಕೊಟ್ಟು 'ಶ್ರೀಹರಿಯು ನನ್ನಲ್ಲಿ ಪ್ರಸನ್ನ-

ದಕ್ಷಿಣಾಂ ಚ ತಥಾ ದತ್ವಾ ಹರಿಸ್ತುಷ್ಟೋ ಭವೇದಿತಿ ।
ಯದ್ಯಶಕ್ತೋ ನರೋಃ ಯಸ್ತು ಬ್ರಾಹ್ಮಣಾನಾಂ ತು ಭೋಜನೇ ||೭||

ಸರ್ವೋಪಸ್ಕರಸಂಯುಕ್ತಂ ತಂಡುಲಂ ಚ ನಿವೇದಯೇತ್ ।
ಏಕೈಕಂ ನವನೀತಾದಿ ಬ್ರಾಹ್ಮಣಾನಾಂ ತು ಯೋ ನರಃ ॥
ತೇನೈವ ಸರ್ವಪುಣ್ಯಾನಿ ಲಭತೇ ನಾತ್ರ ಸಂಶಯಃ ||೮||

ಚಾಪಸ್ಥೇ ಚ ಯದಾ ಭಾನೌ ತಂಡುಲಂ ಚ ಪ್ರಯಚ್ಛತಿ ।
ಪೂರ್ಣಾಯುಷ್ಯಮವಾಪ್ನೋತಿ ದುರಿತಂ ಚ ವಿನಶ್ಯತಿ ||೯||

ಮುದ್ಗಾನ್ನಂ ಚೈವ ವಿಪ್ರಾಯ ಮುರಾರೇಃ ಪ್ರೀತಿಕಾರಣಾತ್ ।
ಮುರಾರಿಲೋಕಮಾಪ್ನೋತಿ ಬ್ರಹ್ಮಹತ್ಯಾಕೃತೇಽಪಿ ಚ ||೧೦||

ನಾಗಲಿ' ಎಂಬ ಉದ್ದೇಶದಿಂದ ಬ್ರಾಹ್ಮಣ ಭೋಜನ ಮಾಡಿಸಬೇಕು. ಈ ರೀತಿ ಪದಾರ್ಥಗಳನ್ನು ತಯಾರಿಸಿ ಪರಮಾತ್ಮನಿಗೆ ನಿವೇದಿಸಿ ಬ್ರಾಹ್ಮಣ ಭೋಜನ ಮಾಡಿಸುವ ಸಾಮರ್ಥ್ಯವಿಲ್ಲದಿದ್ದ ನರನು ||೭|| ಸರ್ವೋಪಸ್ಕರಗಳಿಂದ ಯುಕ್ತ ವಾದ ತಂಡುಲವನ್ನಾದರೂ ['ಸೀದಾ'] ಬ್ರಾಹ್ಮಣನಿಗೆ ಕೊಡಬೇಕು. ಇದೂ ಸಾಧ್ಯವಿರದಿದ್ದರೆ ಬೆಣ್ಣೆ ಮುಂತಾದ ಒಂದೊಂದೇ ಪದಾರ್ಥವನ್ನು ಕೊಟ್ಟರೂ ಅಷ್ಟು ಮಾತ್ರದಿಂದಲೇ ಆ ದಾನಿಯು ನಿಶ್ಚಿತವಾಗಿ ಸರ್ವಪುಣ್ಯಗಳನ್ನು ಪಡೆಯುವನು ||೮|| ಧನುರ್ಮಾಸದಲ್ಲಿ ತಂಡುಲದಾನ [ಅಕ್ಕಿದಾನ] ವನ್ನು ಮಾಡುವವನು ಪೂರ್ಣಾಯುಷ್ಯವನ್ನು ಹೊಂದುವನಲ್ಲದೇ ಅವನ ಸಕಲದುರಿತ ಗಳು ನಾಶವಾಗುವವು ||೯|| ಮುರಾರಿ ಶ್ರೀ ಕೃಷ್ಣನ ಪ್ರೀತ್ಯರ್ಥವಾಗಿ ಧನುರ್ಮಾಸದಲ್ಲಿ ಸತ್ಪಾತ್ರನಾದ ಬ್ರಾಹ್ಮಣನಿಗೆ ಮುದ್ಗಾನ್ನ [ಹುಗ್ಗಿ] ವನ್ನು ಕೊಡುವವನು ಬ್ರಹ್ಮಹತ್ಯಾ ಮಾಡಿದವನಾಗಿದ್ದರೂ ಮರಣಾನಂತರ ಮುರಾರಿ ಲೋಕವನ್ನು ಸೇರುವನು ||೧೦|| ಹೇ ಸತ್ಪುತ್ರನಾದ ಚತುರ್ಮುಖನೇ,

ನವನೀತಂ ಚ ಯೋ ದದ್ಯಾತ್ ಶ್ರೀಕೃಷ್ಣಪ್ರೀತಯೇ ಸುತ |
ಕೈಟಭಾರೇಃ ಪಾದಮೂಲಂ ಪ್ರಾಪ್ನೋತ್ಯೇವ ನ ಸಂಶಯಃ ||೧೧||

ದಧಿಖಂಡಂ ಚ ಯೋ ದದ್ಯಾತ್ ವೈಷ್ಣವಾಯ ದ್ವಿಜಾತಯೇ |
ಸರ್ವಪಾಪವಿನಿರ್ಮುಕ್ತೋ ವಿಷ್ಣುಲೋಕಂ ಚ ಗಚ್ಛತಿ ||೧೨||

ಮಾಷಂ ತು ಯೋ ದ್ವಿಜೇಂದ್ರಾಯ ಗೃಹಪೀಡಾದಿನಾಶನಂ |
ತೇನೈವ ಮೋಕ್ಷಮಾಪ್ನೋತಿ ನಾತ್ರ ಕಾರ್ಯಾ ವಿಚಾರಣಾ ||೧೩||

ಪೂಗೀಫಲೈಃ ಸಮಾಯುಕ್ತಂ ನಾಗವಲ್ಲೀದಲೈರ್ಯುತಂ |
ಕರ್ಪೂರಾಗರುಸಂಯುಕ್ತಂ ದದ್ಯಾತ್ತಾಂಬೂಲಮುತ್ತಮಂ ||೧೪||

ಶ್ರೀಕೃಷ್ಣನ ಪ್ರೀತಿ ಸಂಪಾದನೆಗಾಗಿ ಯಾವನು ನವನೀತವನ್ನು [ಸುವಾಸಿತ ಹೊಸ ಬೆಣ್ಣೆ] ಕೊಡುವನೋ ಅವನು ನಿಶ್ಚಯವಾಗಿ ಶ್ರೀಹರಿಯ ಪಾದ ವನ್ನು ಸೇರುವನು || ೧೧ || ವಿಷ್ಣುಭಕ್ತನಾದ ಬ್ರಾಹ್ಮಣನಿಗೆ ದಧಿಖಂಡ (ಗಟ್ಟಿಯಾದ ಕೆನೆ ಕೆನೆ ಮೊಸರು) ವನ್ನು ಕೊಡುವವನು ಸರ್ವಪಾಪಗಳಿಂದ ಮುಕ್ತನಾಗಿ ಮರಣಾನಂತರ ವಿಷ್ಣುಲೋಕವನ್ನು ಹೊಂದುವನು ॥ ೧೨ ॥ ಗ್ರಹಪೀಡಾದಿಗಳ ಉಪಶಮನ ಮಾಡುವ 'ಮಾಷ' (ಉದ್ದು) ನ್ನು ಈ ಧನುರ್ಮಾಸದಲ್ಲಿ ಬ್ರಾಹ್ಮಣನಿಗೆ ಕೊಟ್ಟರೆ ಅದರಿಂದಲೇ ಮೋಕ್ಷಪ್ರಾಪ್ತಿ ಯಾಗುವದು ॥ ೧೩ ॥ ಅಡಿಕೆ, ಕೋಮಲ ವೀಳ್ಯದೆಲೆ, ಕರ್ಪೂರ, ಅಗರು, ಮುಂತಾದವುಗಳಿಂದ ಯುಕ್ತವಾದ ಉತ್ತಮ ತಾಂಬೂಲವನ್ನು ಬ್ರಾಹ್ಮಣ ನಿಗೆ ಕೊಡಬೇಕು ॥ ೧೪ ॥ ಅಷ್ಟುಮಾತ್ರದಿಂದಲೇ ದಾನಿಯು ಇಹಲೋಕ

ತಾವಲ್ಲಬ್ಧ್ವಾ ಯಶೋ ಧೈರ್ಯಂ ಶ್ರಿಯಮಾಪ್ನೋತಿ ಮಾನವಃ ।
ರೋಗೀ ದತ್ವಾsರೋಗೀಸ್ಯಾತ್ ನಿರೋಗೀ ಮೋಕ್ಷಮಾಪ್ನು
ಯಾತ್ ॥೧೫॥

ಚಾಪಸ್ಥೇ ಚ ಯದಾ ಭಾನೌ ಯೋ ದದ್ಯಾತ್ ಕಂಬಲಂ ದ್ವಿಜೇ।
ಅಪಮೃತ್ಯೋಃ ಕಾಲಮೃತ್ಯೋಃ ಮುಕ್ತೋ ಭವತಿ
ತತ್ ಕ್ಷಣಾತ್ ॥೧೬॥

ವಸ್ತ್ರದಾನಂ ತು ಯೋ ದದ್ಯಾತ್ ಶೀತಾರ್ತಾಯ ದ್ವಿಜಾತಯೇ ।
ತಸ್ಯ ಪುಣ್ಯಫಲಂ ವಕ್ತುಂ ನಾಹಂ ಶಕ್ತೋsಸ್ಮಿ ಮಾನದ ॥೧೭॥

ಊರ್ಣವಸ್ತ್ರಂ ತು ಯೋ ದದ್ಯಾತ್ ತತ್ವನಿಷ್ಠಾಯ ಸತ್ತಮ ।
ತಸ್ಯ ಪುಣ್ಯಫಲಂ ವಕ್ತುಂ ನಾಹಂ ಶಕ್ತೋsಸ್ಮಿ ಮಾನದ ॥೧೮॥

ದಲ್ಲಿ ಯಶಸ್ಸು, ಧೈರ್ಯ, ಸಂಪತ್ತುಗಳನ್ನು ಪಡೆಯುವನು. ರೋಗಿಯು ಇಂಥ ತಾಂಬೂಲವನ್ನು ಕೊಡುವುದರಿಂದ ರೋಗಮುಕ್ತನಾಗುವನು, ನಿರೋಗಿಯಾದವನು ಕೊಟ್ಟರೆ ಮರಣಾನಂತರ ಮೋಕ್ಷವನ್ನೂ ಹೊಂದುವನು ॥೧೫॥ ಈ ಧನುರ್ಮಾಸದಲ್ಲಿ ಬ್ರಾಹ್ಮಣನಿಗೆ ಹೊದ್ದುಕೊಳ್ಳಲು ಕಂಬಳಿಗಳನ್ನು ಕೊಟ್ಟರೆ ಆ ದಾನಿಯು ಅಪಮೃತ್ಯುವಿನಿಂದಲೂ ಹಾಗೂ ಕಾಲಮೃತ್ಯುವಿನಿಂದಲೂ ಮುಕ್ತನಾಗುವನು ॥ ೧೬ ॥ ಹೇ ಬ್ರಹ್ಮ, ಛಳಿಯಿಂದ ಪೀಡಿತನಾದ ಬ್ರಾಹ್ಮಣನಿಗೆ ವಸ್ತ್ರದಾನವನ್ನು ಮಾಡುವ ನರನ ಪುಣ್ಯಫಲದ ಮಿತಿಯನ್ನು ಹೇಳಲು ನಾನಂತೂ ಶಕ್ತನಲ್ಲ! ॥ ೧೭ ॥ ಅದರಂತೆ ವಿಷ್ಣುಭಕ್ತನಾದ ಬ್ರಾಹ್ಮಣನಿಗೆ ಉಣ್ಣೆಯ ವಸ್ತ್ರವನ್ನು ಕೊಡುವವನ ಪುಣ್ಯಮಿತಿಯನ್ನು ಹೇಳಲೂ ನಾನು ಸಮರ್ಥನಲ್ಲ ॥೧೮॥

ತುಂಬರೀಂ ಗುಡಸಂಯುಕ್ತಾಂ ವೃಷಭೋದ್ವಾಹಿತಾಂ ತದಾ ।
ಅಪಮೃತ್ಯೋಃ ಕಾಲಮೃತ್ಯೋಃ ಮುಕ್ತೋ ಭವತಿ
ತತ್ ಕ್ಷಣಾತ್ ||೧೯||

ಕೂಷ್ಮಾಂಡದಾನಂ ಕುರ್ಯಾಚ್ಚ ಚಾಪಸ್ಥೇ ಭಾಸ್ಕರೇ ಸತಿ ।
ನ ತಸ್ಯ ಸಂತತೇಃಹಾರ್ನಿಃ ಜಾಯತೇ ಶತಪೌರುಷೀ || ೨೦||

ನಾರಿಕೇಲಫಲಂ ಚೈವ ವಿಪ್ರವರ್ಯಾಯ ಧೀಮತೇ ।
ಸಪ್ತಜನ್ಮ ಭವೇದ್ವಿಪ್ರೋ ಧನಾಢ್ಯೋ ವೇದಪಾರಗಃ ||೨೧||

ಕುಲೈಶ್ಚ ಸಪ್ತಭಿರ್ಯುಕ್ತೋ ಮೋದತೇ ವಿಷ್ಣುಮಂದಿರೇ ।
ತಸ್ಮಾತ್ ದಾನಂ ಪ್ರಶಂಸಂತಿ ವಿಷ್ಣುಪ್ರೀತಿಕರಂ ಚ ಯತ್ ||೨೨||

ಬೇಳೆ, ಬೆಲ್ಲ. ಘೃತಗಳನ್ನು ಕೊಟ್ಟರೆ ಅಪಮೃತ್ಯು ಹಾಗೂ ಕಾಲ ಮೃತ್ಯು ಗಳ ಭಯವು ಇಲ್ಲದಂತಾಗುವದು. ॥೧೯॥ ಧನುರ್ಮಾಸದಲ್ಲಿ ಕೂಷ್ಮಾಂಡ (ಕುಂಬಳಕಾಯಿ) ದಾನ ಮಾಡುವವನ ಸಂತತಿಯು ನಾಶವಾಗುವದಿಲ್ಲ, ಅವನ ವಂಶದಲ್ಲಿ ನೂರಾರು ಬಲಿಷ್ಠರಾದ ಸತ್ಪುತ್ರರು ಜನಿಸುವರು ॥ ೨೦ || ವಿಪ್ರಶ್ರೇಷ್ಠನಾದ ವಿದ್ವಾಂಸನಿಗೆ ನಾರಿಕೇಲಫಲವನ್ನು (ಟೆಂಗಿನಕಾಯಿ) ಕೊಡುವವನು ಮುಂದಿನ ಏಳು ಜನ್ಮಗಳಲ್ಲಿ ಸತ್ಕುಲ ಬ್ರಾಹ್ಮಣನಾಗಿ ಹುಟ್ಟಿ ಆಗ ಧನಾಢ್ಯನೂ, ವೇದಪಾರಗನೂ ಆಗಿರುವನು. ||೨೧|| ಮರಣಾನಂತರ ತನ್ನ ಏಳು ಕುಲದ ಪಿತೃಗಳಿಂದ ಯುಕ್ತನಾಗಿ ವಿಷ್ಣುಲೋಕವನ್ನು ಹೊಂದಿ ಅಲ್ಲಿ ಸುಖದಿಂದ ಇರುವನು. ಆದ್ದರಿಂದ ಹೇ ಬ್ರಹ್ಮಾ, ಧನುರ್ಮಾಸದಲ್ಲಿ

ಇತಿ ಶ್ರೀ ಪಂಚರಾತ್ರಾಗಮೇ ಬ್ರಹ್ಮಹಂಸಸಂವಾದೇ ಧನುಷೀ | ಧನುರ್ಮಾಸಮಾಹಾತ್ಮ್ಯೇ ತೃತೀಯೋಽಧ್ಯಾಯಃ ||

ದಾನಗಳು ವಿಷ್ಣುಪ್ರೀತಿಕರವಾಗಿರುವುದರಿಂದ ಜ್ಞಾನಿಗಳು ವಿವಿಧ ದಾನಗಳನ್ನು ಪ್ರಶಂಸಿಸುತ್ತಾರೆ || ೨೨ ||

|| ಇಲ್ಲಿಗೆ ಪಂಚರಾತ್ರಾಗಮದಲ್ಲಿ ಬ್ರಹ್ಮ-ಹಂಸ ಸಂವಾದದಲ್ಲಿ ಉಕ್ತವಾದ ಧನುರ್ಮಾಸಮಹಾತ್ಮೆಯಲ್ಲಿ 'ಧನುರ್ಮಾಸದ ವಿವಿಧ ದಾನಗಳು' ಎಂಬ ೩ ನೆಯ ಅಧ್ಯಾಯವು ಸಮಾಪ್ತವಾಯಿತು ||

|| ಶ್ರೀಕೃಷ್ಣಾರ್ಪಣಮಸ್ತು ||

ಅಧ್ಯಾಯ-೪

ಬ್ರಾಹ್ಮಣ ಭೋಜನ ಮತ್ತು ಸ್ವಯಂಪಾಕ ಮಹಿಮೆ

ಬ್ರಹ್ಮೋವಾಚ—

ಹರೇಃ ಪ್ರೀತಿವಿಧಾನಾರ್ಥಂ ಬ್ರಾಹ್ಮಣಾನಾಂ ನಿಮಂತ್ರಣಂ |
ಪರಸ್ಮಿನ್ನೇವ ಹಿ ದಿನೇ ಇತ್ಯುಕ್ತಂ ತು ಸುರೋತ್ತಮ ॥ ೧ ॥

ಅನುಕೂಲತೋ ಗೃಹೇ ನಾಸ್ತಿ ಕಥಂ ಕಾರ್ಯಂ ದ್ವಿಜಾತಿಭಿಃ |
ಏತದ್ ಬ್ರೂಹಿ ಮಹಾಭಾಗ ಸರ್ವಜ್ಞೋಽಸಿ ಸುರೋತ್ತಮ ॥ ೨ ॥

ಹೇ ದೇವದೇವೋತ್ತಮಾ, ಪರಮಾತ್ಮಾ, ಶ್ರೀಹರಿಯಾದ ನಿನ್ನ ಪ್ರೀತ್ಯರ್ಥವಾಗಿ ಬ್ರಾಹ್ಮಣರನ್ನು ಭೋಜನಕ್ಕೆ ಮುನ್ನಾದಿನವೇ ಆಮಂತ್ರಿಸಿ ಮನೆಗೆ ಕರೆದುಕೊಂಡು ಬಂದು ಮರುದಿನ ಬೆಳಿಗ್ಗೆ ಭೋಜನ ಮಾಡಿಸ ಬೇಕೆಂದು ತಿಳಿಸಿದಿ ॥೧॥ ಆದರೆ ಇದೆಲ್ಲದಕ್ಕೆ ಮನೆಯಲ್ಲಿ ಅನುಕೂಲವಿರದಿದ್ದರೆ ಬ್ರಾಹ್ಮಣರು ಧನುರ್ಮಾಸ ವ್ರತವನ್ನು ಹೇಗೆ ಆಚರಿಸಬೇಕೆಂಬುದನ್ನು ನಾನು ಅರಿಯೆನು. ಸರ್ವಜ್ಞನಾದ ನೀನೇ ಎಲ್ಲವನ್ನೂ ತಿಳಿಸಿ ಅನುಗ್ರಹಿಸ ಬೇಕು'' ಎಂದು ಚತುರ್ಮುಖ ಬ್ರಹ್ಮನು ಪ್ರಾರ್ಥಿಸಲು ||೨|| ಹಂಸರೂಪೀ

ಹಂಸ ಉವಾಚ—

ಬ್ರಾಹ್ಮಣಾನ್ ಗೃಹಮಾಹೂಯ ನಿಮಂತ್ರಯತಿ ಸತ್ತಮ ।
ತಸ್ಮಾಚ್ಚ ದ್ವಿಗುಣಂ ಪುಣ್ಯಂ ಗೃಹಂ ಗತ್ವಾ ನಿಮಂತ್ರಿತೇ ||೩||

ತದ್ವಚ್ಚ ಭೋಜನಂ ಜ್ಞೇಯಂ ಇತಿ ವಿದ್ಧಿ ಸುರೋತ್ತಮ ||೪||

ಪಾಕಂ ಕೃತ್ವಾ ಬ್ರಾಹ್ಮಣಸ್ಯ ದತ್ವಾ ಪುಣ್ಯಂ ಚ ಲಭ್ಯತೇ ।
ತತ್ಪುಣ್ಯಾದ್ ದ್ವಿಗುಣಂ ಪುಣ್ಯಂ ಸ್ವಯಂಪಾಕೇ ಕೃತೇ ಸತಿ ||೫||

ಪರಮಾತ್ಮನು ಹೇಳಿದನು- ಎಲೈ ಸತ್ಪುತ್ರನೇ ಧನುರ್ಮಾಸದಲ್ಲಿ ಬ್ರಾಹ್ಮಣರನ್ನು ತನ್ನ ಮನೆಗೆ ಕರೆದು ಭೋಜನಕ್ಕಾಗಿ ಆಮಂತ್ರಿಸುವುದಕ್ಕಿಂತಲೂ ಎರಡು ಪಟ್ಟು ಅಧಿಕವಾದ ಪುಣ್ಯವು ಬ್ರಾಹ್ಮಣರ ಮನೆಗೇ ಹೋಗಿ ಆಮಂತ್ರಿಸುವುದರಿಂದ ಪ್ರಾಪ್ತವಾಗುವದು. ||೩|| ಭೋಜನ ವಿಷಯದಲ್ಲಿಯೂ ಇದರಂತೆಯೇ ತಿಳಿಯಬೇಕು. ||೪|| ಬ್ರಾಹ್ಮಣನ ಮನೆಗೆ ಹೋಗಿ ಅವನ ಪದಾರ್ಥಗಳಿಂದಲೇ ಪಾಕವನ್ನು ಸಿದ್ಧಪಡಿಸಿ ಪೂಜಾ ನೈವೇದ್ಯಾದಿಗಳ ನಂತರ ಆ ಪಾಕ ಪದಾರ್ಥಗಳನ್ನು ಬ್ರಾಹ್ಮಣರಿಗೆ ಬಡಿಸಿದಾಗ ಬರುವ ಪುಣ್ಯಕ್ಕಿಂತಲೂ (ಅಂದರೆ ದಾನಿಯು ಬ್ರಾಹ್ಮಣ ದಂಪತಿಗೆ ಅಡಿಗೆ ಮಾಡಿಕೊಳ್ಳಲು ಪದಾರ್ಥಗಳನ್ನು ಕೊಡುವನು, ಬ್ರಾಹ್ಮಣನ ಪತ್ನಿಯು ಸಿದ್ಧಪಡಿಸಿದ ಪಾಕ ಪದಾರ್ಥಗಳನ್ನು ಬ್ರಾಹ್ಮಣನು ದೇವಪೂಜಾದಿಗಳ ನಂತರ ಶ್ರೀಹರಿಗೆ ನಿವೇದಿಸಿಯಾದ ಮೇಲೆ ಬ್ರಾಹ್ಮಣ ದಂಪತಿಗಳು ಆ ಪದಾರ್ಥಗಳನ್ನು ಬಡಿಸಿಕೊಂಡು ಭೋಜನಕ್ಕೆ ಕೂಡುವಾಗ 'ಶ್ರೀ ಕೃಷ್ಣಾರ್ಪಣ'ವೆಂದು ಹೇಳುವ ದಾನಿಯು ಪಡೆಯುವ ಪುಣ್ಯಕ್ಕಿಂತಲೂ) ಎರಡು ಪಟ್ಟು ಅಧಿಕವಾದ ಪುಣ್ಯವು ಅವರ ಮನೆಯಲ್ಲಿ ತನ್ನ ಪದಾರ್ಥಗಳಿಂದ ತಾನೇ ಅಡಿಗೆ ಮಾಡಿ (ಬ್ರಾಹ್ಮಣ ದಂಪತಿಗಳಿಗೆ) ಬಡಿಸಿ ಭೋಜನ ಮಾಡಿಸಿದಾಗ ಪ್ರಾಪ್ತವಾಗುವದು. ||೫|| ಇನ್ನು ತನ್ನ ಮನೆಯಲ್ಲಿ ಸಿದ್ಧಪಡಿಸಿ ಸಂಸ್ಕೃತ

ತಸ್ಮಾದಷ್ಟಗುಣಂ ಪುಣ್ಯಂ ಗೃಹಂ ಗತ್ವಾ ಸಮರ್ಪಿತಂ ।
ಅನ್ನಂ ದತ್ವಾ ದ್ವಿಜೇಂದ್ರಾಯ ಸರ್ವೋಪಸ್ಕರಸಂಯುತಂ ||೬||

ಭಕ್ತ್ಯಾ ಚ ತದ್ಗೃಹೇ ಭುಕ್ತ್ವಾ ಸರ್ವಪಾಪೈಃ ಪ್ರಮುಚ್ಯತೇ ।
ಮಹಾಪಾತಕಯುಕ್ತೋಽಪಿ ಗಚ್ಛೇದ್ವೈಷ್ಣವಮಂದಿರಂ ||೭||

ಯಾಚಯೇದ್ ವೈಷ್ಣವಸ್ಯಾನ್ನಂ ತದಭಾವೇ ಜಲಂ ಪಿಬೇತ್ ।
ಇತಿ ಜ್ಞಾತ್ವೇಹ ವಿಪ್ರೇಂದ್ರ ಸಪತ್ನೀಕಂ ದ್ವಿಜೋತ್ತಮಂ ||೮||

ಭೋಜಯಿತ್ವಾ ಗೃಹಂ ಗಚ್ಛೇತ್ಸ ಮುಕ್ತೋ ಭವತಿ ಧ್ರುವಂ ||೯||

ವಾದ ವಿವಿಧ ಪಾಕಪದಾರ್ಥಗಳನ್ನು ಬ್ರಾಹ್ಮಣ ದಂಪತಿಗಳಿದ್ದ ಮನೆಗೇ ಹೋಗಿ ಸಮರ್ಪಿಸಿದರೆ ಎಂಟು ಪಟ್ಟು ಅಧಿಕವಾದ ಪುಣ್ಯಪ್ರಾಪ್ತಿಯಾಗುವದು. ಸರ್ವೋಪಸ್ಕರಗಳಿಂದ ಯುಕ್ತವಾದ||೬||ಪಾಕಪದಾರ್ಥಗಳನ್ನು ದ್ವಿಜೇಂದ್ರನಿಗೆ ಸಮರ್ಪಿಸಿ ಅವನ ಮನೆಯಲ್ಲಿಯೇ ಶೇಷ ಪದಾರ್ಥಗಳನ್ನು ಸೇವಿಸುವವನ ಸಕಲ ಪಾಪಗಳೂ ನಾಶವಾಗುವವು. ಅಂಥವನು ಮಹಾಪಾತಕಗಳಿಂದ ಯುಕ್ತನಾಗಿದ್ದರೂ ಪಾಕದಾನ ಭೋಜನಾದಿಗಳಿಂದ ಶುದ್ಧನಾಗಿ ಮರಣಾನಂತರ ವಿಷ್ಣುಲೋಕವನ್ನು ಹೊಂದುವನು. ||೭|| ಯಾವಾಗಲೂ ವೈಷ್ಣವರ (ವಿಷ್ಣುಭಕ್ತರ) ಮನೆಯಲ್ಲಿಯ ಅನ್ನವನ್ನೇ ಭೋಜನಕ್ಕಾಗಿ ಪ್ರಾರ್ಥಿಸಿ ಪಡೆಯಬೇಕು. (ಭಿಕ್ಷಾ ಸ್ವೀಕಾರ ಮಾಡಬೇಕು.) ಅನ್ನವು ಸಿಗದಿದ್ದರೆ ವೈಷ್ಣವರ ಮನೆಯ ಜಲವನ್ನಾದರೂ ಕೇಳಿ ಪಡೆದು ಕುಡಿಯಬೇಕು. ಬ್ರಹ್ಮಾ,— ಈ ವಿಷಯವನ್ನು ತಿಳಿದು ಸಪತ್ನೀಕನಾದ ಬ್ರಾಹ್ಮಣನಿಗೆ ಅವನ ಮನೆಯಲ್ಲೇ ಭೋಜನ ಮಾಡಿಸಿ ತನ್ನ ಮನೆಗೆ ತಿರುಗಿ ಬಂದು ಭೋಜನ ಮಾಡುವವನೂ ಮುಂದೆ ನಿಶ್ಚಿತವಾಗಿ ಮೋಕ್ಷವನ್ನು ಪಡೆಯುವನು ||೯|| ಇನ್ನು ಬ್ರಾಹ್ಮಣನು ಯಜ-

ಭೋಜನಾತ್ ದ್ವಿಗುಣಂ ಪುಣ್ಯಂ ಸ್ವಯಂ ಪಾಕೇ ಕೃತೇ ದ್ವಿಜೇ ।
ತದೇತದ್ ಪಿಷಯೇ ಪ್ರೋಕ್ತಂ ಸರ್ವವೃತ್ತಂ ಕಥಾಂತರೇ ॥೧೦॥

ದ್ವಾಪರೇಽಥ ಯುಗೇ ಪೂರ್ವಂ ಪಾಂಡವಾ ಯಜ್ಞಮಾರಭನ್ ।
ಬ್ರಾಹ್ಮಣಾನಾಂ ಸಹಸ್ರಂ ತು ಪ್ರತ್ಯಹಂ ಭೋಜನಂ ಭವೇತ್ ॥೧೧॥

ಏಕಸ್ಮಿನ್ನೇವ ಹಿ ದಿನೇ ಮಧ್ಯಾಹ್ನಸಮಯೇ ದ್ವಿಜಃ ।
ಅನ್ನಾರ್ಥೀ ಬ್ರಾಹ್ಮಣಃ ಕಶ್ಚಿತ್ ಧರ್ಮರಾಜಗೃಹಂ ಪ್ರತಿ ॥೧೨॥

ದೃಷ್ಟ್ವಾ ಚ ಧರ್ಮರಾಜಾನಂ ಅನ್ನಂ ದೇಹೀತ್ಯುವಾಚ ಹ ।
ಶ್ರುತ್ವಾ ತದಾಬ್ರವೀದ್ವಾಕ್ಯಂ ಸ್ನಾತ್ವಾ ಽಽಗಚ್ಛ ದ್ವಿಜೋತ್ತಮ॥೧೩॥

ಮಾನನ ಮನೆಯಲ್ಲಿ ಅಡಿಗೆ ಮಾಡಿಕೊಂಡು ಭೋಜನ ಮಾಡಿದರೆ ಯಜಮಾನನು ಎರಡು ಪಟ್ಟು ಅಧಿಕವಾದ ಪುಣ್ಯವನ್ನು ಹೊಂದುವನು. ಈ ವಿಷಯದಲ್ಲಿ ಕಥಾಂತರದಲ್ಲಿಯ ಒಂದು ಪುರಾತನ ವೃತ್ತಾಂತವು ಉದಾಹರಿಸಲ್ಪಡುತ್ತದೆ. ||೧೦|| ಹಿಂದಕ್ಕೆ ಪ್ವಾಪರಯುಗದಲ್ಲಿ ಪಾಂಡವರು ಒಂದು ಯಜ್ಞವನ್ನು ಪ್ರಾರಂಭಿಸಿದರು. ಆ ಯಜ್ಞಾಂಗವಾಗಿ ಪ್ರತಿ ದಿನ ಒಂದು ಸಹಸ್ರ ಬ್ರಾಹ್ಮಣರ ಭೋಜನ ನಡೆಯಬೇಕಾಗಿದ್ದಿತು. ||೧೧|| ಹೀಗೆ ನಿತ್ಯವೂ ನಡೆಯುತ್ತಿರಲು, ಒಂದು ದಿನ ಮದ್ಯಾಹ್ನದ ಸಮಯಕ್ಕೆ ಒಬ್ಬ ಬ್ರಾಹ್ಮಣನು ಅನ್ನಾರ್ಥಿಯಾಗಿ ಧರ್ಮರಾಜನ ಅರಮನೆ ಎದುರು ಬಂದು ನಿಂತನು. ||೧೨|| ಅಲ್ಲಿ ಬಂದ ಧರ್ಮರಾಜನನ್ನು ಕಂಡು 'ಭೋ ರಾಜನೇ, ನನಗೆ ಭೀಕ್ಷೆಯನ್ನು ನೀಡು ಎಂದು ಯಾಚಿಸಿದನು. ಇದನ್ನು ಕೇಳಿದ ಧರ್ಮರಾಜನು—'ಹೇ ದ್ವಿಜೋತ್ತಮಾ, ಸ್ನಾನವನ್ನು ಮಾಡಿಕೊಂಡು ಬಾ, ಅಷ್ಟರಲ್ಲಿ ಎಲ್ಲವೂ ಸಿದ್ಧವಾಗಿರುವದು' ||೧೩|| ಎಂದೆನಲು ಆ ಬ್ರಾಹ್ಮಣನು 'ಹೇ ರಾಜಾ, ನಾನು

ಇತ್ಯುಕ್ತೇ ಚ ತದಾ ವಿಪ್ರೋ ಸ್ವಯಂಪಾಕೀ ತ್ವಹಂ ತ್ವಿತಿ ।
ಇತ್ಯುಕ್ತೇ ಪ್ರಾಹಸತ್ ರಾಜಾ ಪಾಕೇ ನೈವ ದ್ವಿಜೋತ್ತಮ ॥೧೪॥

ದ್ರೌಪದೀ ಪಾಕಕರ್ತ್ರೀ ಚ ಭೀಮಸ್ತು ಪರಿವೇಷತಿ ।
ಬ್ರಾಹ್ಮಣಾನಾಂ ಭೋಜನಂ ತು ಅಹಂ ಕರ್ತಾ ದ್ವಿಜೋತ್ತಮ॥೧೫॥

ತಸ್ಮಾನ್ಮಮ ಗೃಹೇ ವಿಪ್ರ ಸಂದೇಹೋ ನೈವ ವಿದ್ಯತೇ ।
ಇತ್ಯುಕ್ತೇ ಧರ್ಮರಾಜೇ ತು ತೂಷ್ಣೀಂ ಸ್ಥಿತ್ವಾ ಮುಹೂರ್ತಕಂ॥೧೬॥

ತಸ್ಮಿನ್ನೇವ ಹಿ ಕಾಲೇ ತು ಕೃಷ್ಣೋ ಉಪೇತ್ಯ ನೃಪಾಂತಿಕಂ ।
ಅಬ್ರವೀದ್ ಯಾದವಶ್ರೇಷ್ಠೋ ಕಸ್ಮಾತ್ತಿಷ್ಠತ್ತವಾಂತಿಕೇ ॥೧೭॥

ಸ್ವಯಂಪಾಕಿಯಾಗಿದ್ದೇನೆ. ಆದ್ದರಿಂದ ಸ್ವಲ್ಪ ಸ್ಥಳವನ್ನು ಕೊಟ್ಟರೆ ನಾನೇ ಅಡಿಗೆ ಮಾಡಿಕೊಳ್ಳುವೆನು' ಎಂದು ತಿಳಿಸಿದನು. ಬ್ರಾಹ್ಮಣನ ಮಾತುಗಳನ್ನು ಕೇಳಿ ಧರ್ಮರಾಜನು ಗಟ್ಟಿಯಾಗಿ ನಕ್ಕು –ಹೇ ಬ್ರಾಹ್ಮಣೋತ್ತಮನೇ, ಈಗಂತೂ ಅಡಿಗೆ ಮಾಡಲು ಸ್ಥಳವಿಲ್ಲ. ಅಡಿಗೆ ಪದಾರ್ಥಗಳೂ ಇಲ್ಲ. ನೀನು ಸ್ನಾನ ಮುಗಿಸಿ ಬರುವದರೊಳಗೇ ||೧೪|| ದ್ರೌಪದಿಯು ಅಡಿಗೆ ಮಾಡಿಡುವಳು. ಭೀಮಸೇನನು ನಿನಗೆ ಬಡಿಸುವನು. ಈ ಯಜ್ಞದ ಯಜಮಾನನಾದ ನಾನು ಬ್ರಾಹ್ಮಣ ಭೋಜನ ಮಾಡಿಸುವಾಗ 'ಕೃಷ್ಣಾರ್ಪಣ' ಹೇಳುವೆನು ||೧೫|| ಆದ್ದರಿಂದ ಹೇ ವಿಪ್ರಾ, ನನ್ನ ಮನೆಯಲ್ಲಿ ನಿನ್ನ ಭೋಜನಕ್ಕೆ ಸಕಲ ವ್ಯವಸ್ಥೆಯಾಗುವದು. ಯಾವ ಸಂದೇಹವನ್ನು ಪಡದಿರು' ಎಂದು ಹೇಳಲು ಆ ಬ್ರಾಹ್ಮಣನು ಬಂದು ಮುಹೂರ್ತ ಕಾಲ ಹಾಗೇ ಸುಮ್ಮನೇ ನಿಂತುಕೊಂಡನು. ||೧೬|| ಅದೇ ಸಮಯಕ್ಕೆ ಸರಿಯಾಗಿ ಯಾದವ ಶ್ರೇಷ್ಠನಾದ ಶ್ರೀಕೃಷ್ಣನು ಅಲ್ಲಿಗೆ ಬಂದು ಧರ್ಮರಾಜನ ಸನಿಹಕ್ಕೆ ಹೋಗಿ–ಅಯ್ಯಾ, ಇಲ್ಲಿ ಬಂದಿರುವ ಈ ಬ್ರಾಹ್ಮಣನು ಏತಕ್ಕಾಗಿ ನಿನ್ನೆದುರು ಹೀಗೆ ನಿಂತುಕೊಂಡಿದ್ದಾನೆ ? ಎಂದು ಕೇಳಲು || ೧೭|| ಆಗ

ರಾಜಾ ತದಾಬ್ರವೀತ್ ಕೃಷ್ಣಂ ಸ್ವಯಂ ಪಾಕಂ ಕರೋಮ್ಯಹಂ |
ಇತ್ಯುಚ್ಯತೇತದ್ವಿಪ್ರೇಣ ಸ್ಥಲಂ ಚೈವ ನ ವಿದ್ಯತೇ ||೧೮||

ಇತ್ಯುಕ್ತವಂತಂ ರಾಜಾನಮೂಚೇ ಕೃಷ್ಣೋ ಜಗದ್ಗುರುಃ |
ಏವಂ ಚೇತ್ತರ್ಹಿ ರಾಜೇಂದ್ರ ಆಜ್ಞಾಂ ದೇಹಿ ದ್ವಿಜೋತ್ತಮಂ|| ೧೯||

ಶಕ್ತಿರ್ನಾಸ್ತಿ ಸುಖಂ ಗಚ್ಛ ಇತಿ ವಕ್ತುಂ ನ ಶಕ್ಯತೇ |
ಇತ್ಯುಕ್ತಂ ಧರ್ಮರಾಜಾನಂ ತದಾ ಕೃಷ್ಣೋಽಬ್ರವೀದಿದಂ ||೨೦||

ಭೋಜನಸ್ಯ ಸ್ಥಲಂ ವಿಪ್ರ ಸ್ವಯಂ ಪಾಕಂ ಕುರುಷ್ವಥ |
ಸ ತಥಾಸ್ತ್ವಿತಿ ರಾಜೇಂದ್ರಂ ಬ್ರಾಹ್ಮಣೋ ಹರ್ಷಮಾಗತಃ ||೨೧||

ಧರ್ಮರಾಜನು ಶ್ರೀಕೃಷ್ಣನಿಗೆ ಹೇಳಿದನು— ಶ್ರೀಹರೇ, ಈ ಬ್ರಾಹ್ಮಣನು ಸ್ವಯಂಪಾಕ ಮಾಡಿಕೊಳ್ಳುವುದಾಗಿ ಹೇಳುತ್ತಿದ್ದಾನೆ. ಆದರೆ ಏನು ಮಾಡುವುದು ! ಅರಮನೆಯಲ್ಲಿ ಅಡಿಗೆ ಮಾಡಿಕೊಳ್ಳಲಿಕ್ಕೆ ಕೊಡಲು ಸ್ಥಳವೇ ಇಲ್ಲ. ||೧೮|| ಧರ್ಮರಾಜನ ಈ ಮಾತುಗಳನ್ನು ಕೇಳಿದ ಜಗದ್ಗುರು ಶ್ರೀಕೃಷ್ಣನು – ಹಾಗಾದರೆ ಹೇ ರಾಜೇಂದ್ರಾ, ಆ ಬ್ರಾಹ್ಮಣನಿಗೆ ನನಗೆ ಭೋಜನ ಮಾಡಿಸುವ ಶಕ್ತಿ ಇಲ್ಲ. ಹಾಗೂ ಪಾಕಕ್ಕೆ ಸ್ಥಳವಿಲ್ಲ, ಎಂದು ಸ್ಪಷ್ಟವಾಗಿ ತಿಳಿಸಿಬಿಟ್ಟು ಅವನಿಗೆ ಮುಂದಕ್ಕೆ ಹೋಗಲು ತಿಳಿಸು ಎಂದೆನಲು ||೧೯|| ಧರ್ಮರಾಜನು ಹೇಳುತ್ತಾನೆ – ಶ್ರೀಹರೇ "ಶಕ್ತಿ ಇಲ್ಲ ಸುಖವಾಗಿ ಮುಂದಕ್ಕೆ ಹೋಗು" ಎಂದು ನಾನಂತೂ ಹೇಳಲಾರೆನು. ಇದನ್ನು ಕೇಳಿದ ಶ್ರೀಕೃಷ್ಣನು ಹಾಗಾದರೆ ಅಡಿಗೆ ಮಾಡಿಕೊಳ್ಳಲು ಅವನಿಗೆ ಸ್ಥಳವನ್ನು ನೀಡು ಎಂದು ಸೂಚಿಸಿದನು. ||೨೦|| ಶ್ರೀಕೃಷ್ಣನ ಆಜ್ಞೆಯಂತೆ ಧರ್ಮರಾಜನು ಆ ಬ್ರಾಹ್ಮಣನನ್ನು ಕುರಿತು—ಭೋ ವಿಪ್ರವರ್ಯಾ, ಭೋಜನ ಮಾಡಿಕೊಳ್ಳಲು ಸ್ಥಳದ ವ್ಯವಸ್ಥೆ ಮಾಡಲಾಗುವದು. ನೀನು ಸ್ವಯಂಪಾಕ ಮಾಡಿಕೊಳ್ಳಬಹುದು" ಎಂದೆನಲು ಹರ್ಷಭರಿತನಾದ ಆ

ಸ್ವಯಂಪಾಕಂ ಚ ಕೃತ್ವಾ ತು ಸರ್ವೋಪಸ್ಕರಸಂಯುತಂ ।
ವಿಪ್ರೈಃ ಸಾಕಂ ತದಾ ವಿಪ್ರೋ ಭುಕ್ತವಾನ್ ರಾಜಮಂದಿರೇ ॥೨೨॥

ಏಕಪಾತ್ರಂ ವಿಹಾಯಾಶು ಸರ್ವಾಣ್ಯುಧೃತವಾನ್ ವಿಭುಃ ।
ವಿಹಾಪಮಾಸ ಭಗವಾನ್ ಏಕಪಾತ್ರಂ ವಿಹಾಯ ಚ ॥೨೩॥

ರಾಜಾ ತದಾಽಬ್ರವೀತ್ ಕೃಷ್ಣಂ ಕಥಮೇತತ್ ವಿಹಾಯ ಚ।
ಇತ್ಯುಕ್ತವಂತಂ ರಾಜಾನಂ ವಿಸ್ಮೃತೋಽಸ್ಮಿ ಮಹಾಮತೇ ॥೨೪॥

ಸ್ವಯಂ ನಿರ್ವಾಹಮಕರೋತ್ ರಾಜಾ ದೃಷ್ಟ್ವಾ ಮಹಾದ್ಭುತಂ ।
ಪಾತ್ರಾಣ್ಯಾನಂತ್ಯಮಗಮನ್ ಸಹಸ್ರಂ ಚ ಯದಾಽಭವತ್ ॥೨೫॥

ಬ್ರಾಹ್ಮಣನು 'ಹಾಗೇ ಆಗಲಿ' ಎಂದು ನುಡಿದನು. ॥೨೧॥ ಅವನು ಧರ್ಮರಾಜನ ಮನೆಯಲ್ಲಿ ಸರ್ವೋಪಸ್ಕರಗಳಿಂದ ಯುಕ್ತವಾದ ವಿವಿಧ ಪಾಕಪದಾರ್ಥಗಳನ್ನು ಸಿದ್ಧಪಡಿಸಿ ಅನೇಕ ಬ್ರಾಹ್ಮಣರೊಂದಿಗೆ ಭೋಜನ ಮಾಡಿದನು. ॥೨೨॥ ಬ್ರಾಹ್ಮಣ ಭೋಜನಾನಂತರ ಶ್ರೀಕೃಷ್ಣ ಪರಮಾತ್ಮನು ಆ ಬ್ರಾಹ್ಮಣನ ಎಂಜಲು ಎಲೆಯೊಂದನ್ನು ಬಿಟ್ಟು ಉಳಿದೆಲ್ಲ ಬ್ರಾಹ್ಮಣರ ಎಂಜಲು ಎಲೆಗಳನ್ನು ಸ್ವತಃ ತಾನೇ ಎತ್ತಿ ಹೊರಗೆ ಚೆಲ್ಲಿ ಸ್ಥಳ ಶುದ್ಧಿ ಮಾಡಿದನು. ॥೨೩॥ ಇದನ್ನೆಲ್ಲ ನೋಡಿ ವಿಸ್ಮಿತನಾದ ಧರ್ಮರಾಜನು— ಶ್ರೀಹರೇ, ಆ ಬ್ರಾಹ್ಮಣನೊಬ್ಬನ ಎಲೆಯನ್ನು ಬಿಟ್ಟು ಉಳಿದೆಲ್ಲ ಎಲೆಗಳನ್ನು ನೀನು ತೆಗೆದದ್ದೇಕೆ ? ಎಂದು ವಿಚಾರಿಸಲು ಶ್ರೀಕೃಷ್ಣನು– ಧರ್ಮರಾಜಾ. ಅರೇ ! ಅದು ಮರೆತುಹೋಯಿತು ಎಂದು ಉತ್ತರಿಸಿದನು. ॥೨೪॥ ಶ್ರೀಕೃಷ್ಣನು ಎಂಜಲು ಎಲೆಗಳನ್ನು ತೆಗೆದದ್ದು ಯೋಗ್ಯವಲ್ಲವೆಂದು ಮನದಲ್ಲಿ ನೊಂದುಕೊಂಡ ಧರ್ಮರಾಜನು ತಾನೇ ಮುಂದಾಗಿ ಅಲ್ಲಿ ಉಳಿದಿದ್ದ ಬ್ರಾಹ್ಮಣನ ಎಂಜಲು ಎಲೆಯೊಂದನ್ನು ತೆಗೆದನು. ಇದೇನಾಶ್ಚರ್ಯ ! ಒಂದು ಎಲೆ ತೆಗೆದರೆ ಅಲ್ಲಿ ಅನಂತ ಎಲೆಗಳಾದವು. ಎಲೆಯನ್ನು ತೆಗೆ ತೆಗೆದಂತೆ ಸಹಸ್ರಾರು ಎಲೆಗಳಾಗಿ ವರ್ಧಿಸುತ್ತ

ಸಮಾಪ್ತಿರ್ನ ಭವೇತ್ತತ್ರ ಕೃಷ್ಣೋಽಪ್ಯಯಂ ತದಾ ನೃಪಃ ।
ಏತದಾಶ್ಚರ್ಯ ಮನ್ವಾನಃ ಸ್ವಯಂಪಾಕಂ ಮಹಾಫಲಂ ||೨೬||

ಪೃಥಕ್ ವೈಶ್ವದೇವಕರಣಾತ್ ದೇವಾನಾಂ ತುಷ್ಟಿದಾಯಕಂ ।
ಸ್ವಯಂಪಾಕೇ ವಿಶಿಷ್ಟೇ ಹಿ ಕೃತೇ ಚ ಚತುರಾನನ ||೨೭||

ದಾನಂ ದದ್ಯಾತ್ ದ್ವಿಜೇಂದ್ರಾಯ ಕೂಷ್ಮಾಂಡಂ ಬ್ರಹ್ಮನಿರ್ಮಿತಂ ।
ಕೂಷ್ಮಾಂಡಸ್ಯ ಪ್ರದಾನೇನ ಸಂತತಿರ್ವರ್ಧತೇ ಸದಾ ||೨೮||

ಧನುರ್ಮಾಸಸ್ಯ ಮಾಹಾತ್ಮ್ಯಂ ಶ್ರುತ್ವಾ ಮೋಕ್ಷಮ-
ವಾಪ್ನುಯಾತ್ ||೨೯||

ಹೋದವು. ||೨೫|| ಎಷ್ಟು ಸಲ ತೆಗೆದರೂ ಎಲೆಗಳು ಮುಗಿಯದೇ ಇರುವದನ್ನು ಕಂಡು ಧರ್ಮರಾಜನು ಆಶ್ಚರ್ಯಚಕಿತನಾದನು. ಮತ್ತು ಆ ಬ್ರಾಹ್ಮಣನು ಮತ್ತಾರೂ ಆಗಿರದೇ ಶ್ರೀ ಕೃಷ್ಣನೇ ಆಗಿರುವನೆಂದೂ ಇತರ ಬ್ರಾಹ್ಮಣರೆಲ್ಲ ದೇವತೆಗಳೆಂದೂ ನಿರ್ಧರಿಸಿದನು. ಸ್ವಯಂಪಾಕವು ಮಹಾ ಮಹಿಮೋಪೇತವಾಗಿರುವದನ್ನು ಮನಗಂಡನು. ||೨೬|| ಪ್ರತ್ಯೇಕ ವೈಶ್ವದೇವ ಮಾಡುವದರಿಂದ ಎಲ್ಲ ದೇವತೆಗಳಿಗೆ ಪ್ರೀತಿಯಾಗುವದೆಂಬುದನ್ನು ತಿಳಿದ ಧರ್ಮರಾಜನು ಧನುರ್ಮಾಸದ ಮಹಿಮೆಯನ್ನು ಕೊಂಡಾಡಿದನು. ಹೇ ಚತುರ್ಮುಖ ಬ್ರಹ್ಮಾ! ನೋಡಿದೆಯಾ ಧನುರ್ಮಾಸದ ಹಾಗೂ ಸ್ವಯಂಪಾಕದ ಮಹಿಮೆಯನ್ನು ! ಧನುರ್ಮಾಸದಲ್ಲಿ ಸ್ವಯಂ ಪಾಕ ಮಾಡಿ ಬ್ರಾಹ್ಮಣ ಭೋಜನ ಮಾಡಿಸಬೇಕು. ||೨೭|| ಸತ್ಪಾತ್ರನಾದ ಬ್ರಾಹ್ಮಣನಿಗೆ ಕೂಷ್ಮಾಂಡ ದಾನವನ್ನು ಕೊಡಬೇಕು. ಕೂಷ್ಮಾಂಡದಾನದಿಂದ ಸದಾ ಕಾಲ ಸಂತತಿಯು ವರ್ಧಿಸುವದು. ||೨೮|| ಇಂಥ ಮಹಿಮೋಪೇತವಾದ ಧನುರ್ಮಾಸದ ಮಹಾತ್ಮೆಯನ್ನು ಯಾರು ಭಕ್ತಿಯಿಂದ ಹೇಳುವರೋ

ಇತಿ ಶ್ರೀಪಂಚರಾತ್ರಾಗಮೇ ಬ್ರಹ್ಮಹಂಸಸಂವಾದೇ ಧನುರ್ಮಾಸ ಮಾಹಾತ್ಮ್ಯೇ ಚತುರ್ಥೋಽಧ್ಯಾಯಃ ॥ ॥ಶ್ರೀಲಕ್ಷ್ಮೀನರಸಿಂಹಾರ್ಪಣಮಸ್ತು॥ಶ್ರೀರಾಮಚಂದ್ರಾರ್ಪಣಮಸ್ತು॥

॥ ಶ್ರೀಕೃಷ್ಣಾರ್ಪಣಮಸ್ತು ॥

ಮತ್ತು ಶ್ರವಣಮಾಡುವರೋ ಅವರು ಇಹಲೋಕದಲ್ಲಿ ಸುಖದಿಂದ ಇದ್ದು ಮರಣಾನಂತರ ಮೋಕ್ಷವನ್ನು ಹೊಂದುವರು. ||೨೯||

॥ಇಲ್ಲಿಗೆ ಶ್ರೀ ಪಂಚರಾತ್ರಾಗಮದಲ್ಲಿ ಬ್ರಹ್ಮ-ಹಂಸಸಂವಾದದಲ್ಲಿ ಉಕ್ತವಾದ ಧನುರ್ಮಾಸ ಮಹಾತ್ಮ್ಯೆಯಲ್ಲಿ "ಬ್ರಾಹ್ಮಣಭೋಜನ ಮತ್ತು ಸ್ವಯಂಪಾಕ ಮಹಿಮೆ" ಎಂಬ ೪ ನೆಯ ಅಧ್ಯಾಯವು ಸಮಾಪ್ತ ವಾಯಿತು. ॥

|| ಇಲ್ಲಿಗೆ ಧನುರ್ಮಾಸದ ಮಹಾತ್ಮ್ಯೆಯು ಸಮಾಪ್ತವಾಯಿತು. ||

|| ಶ್ರೀ ಕೃಷ್ಣಾರ್ಪಣಮಸ್ತು ||

卐 卐

॥ ಭದ್ರಲಕ್ಷ್ಮೀ ಸ್ತೋತ್ರಂ ॥

ಶ್ರೀದೇವೀ ಪ್ರಥಮಂ ನಾಮ ದ್ವಿತೀಯಮಮೃತೋದ್ಭವಾ।
ತೃತೀಯಂ ಕಮಲಾ ಪ್ರೋಕ್ತಾ ಚತುರ್ಥಂ ಲೋಕಸುಂದರೀ॥
ಪಂಚಮಂ ವಿಷ್ಣುಪತ್ನೀತಿ ಷಷ್ಠಂ ಶ್ರೀವೈಷ್ಣವೀತಿ ಚ ।
ಸಪ್ತಮಂ ತು ವರಾರೋಹಾ ಅಷ್ಟಮಂ ಹರಿವಲ್ಲಭಾ ॥
ನವಮಂ ಶಾರ್ಙ್ಗಿಣೀ ಪ್ರೋಕ್ತಾ ದಶಮಂ ದೇವದೇವಿಕಾ ।
ಏಕಾದಶಂ ಮಹಾಲಕ್ಷ್ಮೀರ್ದ್ವಾದಶಂ ಲೋಕಸುಂದರೀ ॥

ಶ್ರೀಃ ಪದ್ಮಾ ಕಮಲಾ ಮುಕುಂದಮಹಿಷೀ ಲಕ್ಷ್ಮೀಸ್ತ್ರಿ-
-ಲೋಕೇಶ್ವರೀ ।
ಮಾ ಕ್ಷೀರಾಬ್ಧಿಸುತಾಽರವಿಂದಜನನೀ ವಿದ್ಯಾ
ಸರೋಜಾತ್ಮಿಕಾ ॥
ಸರ್ವಾಭೀಷ್ಟಫಲಪ್ರದೇತಿ ಸತತಂ ನಾಮಾನಿ ಯೇ ದ್ವಾದಶ ।
ಪ್ರಾತಃ ಶುದ್ಧತರಾಃ ಪಠಂತಿ ಸತತಂ ಸರ್ವಾಂಲ್ಲಭಂತೇ ಶುಭಾನ್॥
ಭದ್ರಲಕ್ಷ್ಮೀಸ್ತವಂ ನಿತ್ಯಂ ಪುಣ್ಯಮೇತಚ್ಛುಭಾವಹಂ ।
ಕಾಲೇ ಸ್ನಾತ್ವಾಪಿ ಕಾವೇರ್ಯಾಂ ಜಪ ಶ್ರೀವೃಕ್ಷಸನ್ನಿಧೌ ॥

॥ ಇತಿ ಶ್ರೀ ಭದ್ರಲಕ್ಷ್ಮೀ ಸ್ತೋತ್ರಂ ಸಂಪೂರ್ಣಂ ॥

॥ ಕೃಷ್ಣಾರ್ಪಣಮಸ್ತು ॥

卐 卐